# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 3-1-2014 ರಂದು ಮಾರುಕಟ್ಟೆ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ : | | ಹಾಜರಿದ್ದ ಅಧಿಕಾರಿಗಳು : |
|---|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಬಿ.ಆರ್. ನಂಜುಂಡಪ್ಪ | ಸದಸ್ಯರು | ಮುಖ್ಯ ಅಭಿಯಂತರರು (ಪೂರ್ವ) |
| ಸಿದ್ದಲಿಂಗಯ್ಯ (ಸಿದ್ದು) | ಸದಸ್ಯರು | ಮುಖ್ಯ ಅಭಿಯಂತರರು (ದಕ್ಷಿಣ) |
| ವಿಜಯ.ಎ | ಸದಸ್ಯರು | ಉಪ ಆಯುಕ್ತರು(ಆಡಳಿತ) |
| ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | ಉಪ ಆಯುಕ್ತರು(ಮಾರುಕಟ್ಟೆ) |
| ಎಲ್. ಶ್ರೀನಿವಾಸ್ | ಸದಸ್ಯರು | ಕಾರ್ಯಪಾಲಕ ಅಭಿಯಂತರರು(ಯೋಜನೆ-ಪೂರ್ವ) |
| ಲತಾ,ಕೆ | ಸದಸ್ಯರು | ಕಾರ್ಯಪಾಲಕ ಅಭಿಯಂತರರು(ಯೋಜನೆ- ಪಶ್ಚಿಮ) |
| ಎಸ್. ಕ್ರಿಯಾಶೈಲಜ | ಸದಸ್ಯರು | ಸ.ಕಾರ್ಯನಿರ್ವಾಹಕ ಅಭಿಯಂತರರು(ಯೋಜನೆ-ದಕ್ಷಿಣ) |
| ಎನ್. ಪಿಳ್ಳಪ್ಪ | ಸದಸ್ಯರು | ಸ.ಕಾ.ನಿ.ಅ (ಮಾರುಕಟ್ಟೆ) |
| ಮುನಿಸಂಜೀವಯ್ಯ | ಸದಸ್ಯರು | ಸಹ ಕಂದಾಯ ಅಧಿಕಾರಿ (ಪೂರ್ವ-ಮಾರುಕಟ್ಟೆ) |
| ಕ್ವೀನ್ ಎಲಿಜಬೆತ್ | ಸದಸ್ಯರು | ಸಹ ಕಂದಾಯ ಅಧಿಕಾರಿ(ಪಶ್ಚಿಮ-ಮಾರುಕಟ್ಟೆ) |
| | | ಸಹ ಕಂದಾಯ ಅಧಿಕಾರಿ(ದಕ್ಷಿಣ-ಮಾರುಕಟ್ಟೆ) |

*****

( ಹಿಂದಿನ ಸಭೆಯ ನಡವಳಿಯನ್ನು ಓದಿ ದಾಖಲಿಸಿಕೊಳ್ಳಲಾಯಿತು)

ಆಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಮಾರುಕಟ್ಟೆ ಇಲಾಖೆ ವ್ಯಾಪ್ತಿಗೆ ಬರುವ ಪಾಲಿಕೆಯ ಮಾರುಕಟ್ಟೆಗಳಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕದ ಪರಿಷ್ಕರಣೆಯ ಬಗ್ಗೆ ಚರ್ಚಿಸಲಾಯಿತು. ಹಾಲಿ ಇರುವ ಪರವಾನಗಿ ಶುಲ್ಕವು ಅತ್ಯಂತ ಕಡಿಮೆ ಇರುವುದರಿಂದ ಪಾಲಿಕೆಗೆ ಅಪಾರ ನಷ್ಟವುಂಟಾಗುತ್ತಿರುವುದನ್ನು ಸಮಿತಿಯು ಪುನರುಚ್ಚರಿಸುತ್ತಾ, ಪಾಲಿಕೆಯು ಸಾಲಕ್ಕಾಗಿ ಆಸ್ತಿಗಳನ್ನು. ಭದ್ರತೆಗಾಗಿ ಒದಗಿಸುವ ಪರಿಸ್ಥಿತಿ ಉಂಟಾಗಿದ್ದು, ಪಾಲಿಕೆಗೆ ನ್ಯಾಯಯುತವಾಗಿ ಬರಬೇಕಾಗಿರುವ ಶುಲ್ಕಗಳನ್ನು ಅಧಿಕಾರಿ, ನೌಕರರು ಕ್ರಮಬದ್ಧವಾಗಿ, ವಸೂಲಿ ಮಾಡಲು ಕ್ರಮ ವಹಿಸಿದ್ದಲ್ಲಿ ಇಂತಹ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಬಹಳಷ್ಟು ಮಳಿಗೆಗಳಿಂದ ಪರವಾನಗಿ ಶುಲ್ಕ ಬಾಕಿ ಬರಬೇಕಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಪ್ರತಿನಿತ್ಯ ವಸೂಲಾತಿ ಕುರಿತು ಮೇಲ್ವಿಚಾರಣೆ ನಡೆಸಿ, ಅಗತ್ಯ ಕ್ರಮಕೈಗೊಳ್ಳಬೇಕಾಗಿದೆ ಎಂದು ಹಾಜರಿದ್ದ ಎಲ್ಲ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕೆಲವು ಸಣ್ಣ ಮಾರುಕಟ್ಟೆಗಳಿಗೆ ಪರವಾನಗಿ ಶುಲ್ಕವನ್ನು 2007-08ರಲ್ಲಿ ಪರಿಷ್ಕರಣೆ ಮಾಡಿ, ನಿರ್ಣಯವಾಗಿದ್ದರೂ ಸಹ ಹಳೆಯ ದರದಲ್ಲಿ ವಸೂಲಿ ಮಾಡುತ್ತಿರುವುದನ್ನು ಸಮಿತಿಯು ಗಮನಿಸಿ, ಹಿರಿಯ ಅಧಿಕಾರಿಗಳು ಈ ಬಗ್ಗೆ ಏನು ಕ್ರಮ ಕೈಗೊಂಡಿರುತ್ತಾರೆಂದು ಪ್ರಶ್ನಿಸಲಾದ ಮೇರೆಗೆ, ಹೊಸ ದರದಂತೆ ಪರವಾನಗಿ ಶುಲ್ಕವನ್ನು ಪಾವತಿಸಲು ಎಲ್ಲಾ ಮಳಿಗೆದಾರರಿಗೂ ಸಹ ನೋಟಿಸ್‌ಗಳನ್ನು ಜಾರಿ ಮಾಡಿ, ತಿಳುವಳಿಕೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ನೋಟಿಸ್‌ಗಳನ್ನು ನೀಡಿಯೂ ಸಹ ಹಳೆಯ ದರದಲ್ಲಿ ಶುಲ್ಕವನ್ನು ಪಾವತಿಸಿಕೊಳ್ಳುತ್ತಿರುವುದು ವಿಷಾಧನೀಯ. ಇದರಿಂದ ಪಾಲಿಕೆಯ ಆರ್ಥಿಕ ಸ್ಥಿತಿಗೆ ಧಕ್ಕೆವುಂಟಾಗಿರುತ್ತದೆ. ಈ ಕುರಿತು ಅಧಿಕಾರಿಗಳು ತಕ್ಷಣ ಎಚ್ಚೆತ್ತುಕೊಂಡು, ಪರಿಷ್ಕೃತ ದರದ ಪ್ರಕಾರ ವಸೂಲಿ ಮಾಡಲು ಕ್ರಮವಹಿಸತಕ್ಕದೆಂದು ಈ ಬಗ್ಗೆ ಉಪ ಆಯುಕ್ತರು (ಮಾರುಕಟ್ಟೆ) ರವರು ಸೂಕ್ತ ಕ್ರಮ ವಹಿಸಲು ಸಮಿತಿಯು ಸೂಚಿಸಿತು

ಪಾಲಿಕೆಯ ಮಾರುಕಟ್ಟೆ ಹಾಗೂ ವಾಣಿಜ್ಯ ಸಂಕೀರ್ಣಗಳಲ್ಲಿರುವ ಮಳಿಗೆಗಳಿಗೆ ಪರವಾನಗಿ ಶುಲ್ಕದ ಪರಿಷ್ಕರಣೆ ಬಹಳ ವರ್ಷಗಳಿಂದ ಮಾಡದೇ ಇರುವುದರಿಂದ ಹಾಲಿ ಪರಿಷ್ಕರಣೆ ಮಾಡಬೇಕಾಗಿದ್ದು, ಈ ಕುರಿತು ವಲಯ ಮುಖ್ಯ ಅಭಿಯಂತರರು ತಮ್ಮ ವಲಯ ವ್ಯಾಪ್ತಿಗೆ ಬರುವ ಮಾರುಕಟ್ಟೆಗಳನ್ನು ಸಂಬಂಧಪಟ್ಟ ಅಯಾ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ಹಾಗೂ ಸಹ ಕಂದಾಯ ಅಧಿಕಾರಿ (ಮಾರುಕಟ್ಟೆ) ರವರೊಂದಿಗೆ ಪರಿಶೀಲಿಸಿ, ಲೋಕೋಪಯೋಗಿ ಇಲಾಖೆಯ 2013–14ನೇ ಸಾಲಿನ ಎಸ್.ಆರ್.ದರದಂತೆ ಹಾಲಿ ಮಳಿಗೆಗಳಿಗೆ ನಿಗಧಿಪಡಿಸಬಹುದಾದ ದರಗಳ ಲೆಕ್ಕಾಚಾರ ಮಾಡಿ, ಪರಿಷ್ಕರಣೆ ಬಗ್ಗೆ ಮುಂದಿನ ಕ್ರಮಕ್ಕಾಗಿ ಸಂಪೂರ್ಣ ವಿವರಗಳುಳ್ಳ ವರದಿಯನ್ನು 15 ದಿನಗಳೊಳಗಾಗಿ ಅಪರ ಆಯುಕ್ತರು (ಮಾರುಕಟ್ಟೆ) ರವರಿಗೆ ಕಳುಹಿಸಿ, ಪ್ರತಿಯನ್ನು ಅಧ್ಯಕ್ಷರು ಮಾರುಕಟ್ಟೆ ಸ್ಥಾಯಿ ಸಮಿತಿರವರಿಗೆ ಸಲ್ಲಿಸಲು ಹಾಜರಿದ್ದ ಮುಖ್ಯ ಅಭಿಯಂತರರಿಗೆ ಸಮಿತಿಯು ಸೂಚಿಸಿತು. ಉಪ ಆಯುಕ್ತರು (ಮಾರುಕಟ್ಟೆ) ರವರು ಪರಿಷ್ಕರಣೆಯ ಲೆಕ್ಕಾಚಾರದೊಂದಿಗೆ ಸಂಪೂರ್ಣ ವರದಿಯೊಂದಿಗೆ ಪರಿಷ್ಕರಣೆ ಪ್ರಸ್ತಾವನೆಯ ಟಿಪ್ಪಣಿಯನ್ನು ಆಯುಕ್ತರ ಮುಖೇನ ಸಮಿತಿಗೆ ಮಂಡಿಸಲು ಕ್ರಮವಹಿಸುವಂತೆ ಸೂಚಿಸಲಾಯಿತು.

ಜಯನಗರ ವಾಣಿಜ್ಯ ಸಂಕೀರ್ಣದ ಕಟ್ಟಡದಲ್ಲಿರುವ ಸರ್ಕಾರಿ ಸಂಸ್ಥೆಗಳ ಕಛೇರಿಗಳು ಸಣ್ಣ ನೀರಾವರಿ ಇಲಾಖೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಲಿಡ್‌ಕರ್, ಪ್ರಾದೇಶಿಕ ಸಾರಿಗೆ ಕಛೇರಿ (ಖಾಲಿ ಮಾಡಿರುವ), ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಸದರನ್ ರೈಲ್ವೇಸ್, ಎನ್.ಟಿ.ಸಿ. ಬಿ.ಎಸ್.ಎನ್.ಎಲ್. ಮುಂತಾದ ಬಾಕಿ ಉಳಿಸಿಕೊಂಡಿರುವ ಪರವಾನಗಿ ಶುಲ್ಕದ ವಿವರಗಳನ್ನು ಪರಿಶೀಲಿಸಲಾಯಿತು. ಸದರಿ ಅಂತಸ್ತುಗಳಲ್ಲಿರುವ ಎಲ್ಲಾ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಪಾಲಿಕೆಯ ಆಯುಕ್ತರ ವತಿಯಿಂದ ಹಲವಾರು ಪತ್ರಗಳನ್ನು ಬರೆದಿದ್ದರೂ ಸಹ ಸದರಿ ಸಂಸ್ಥೆಗಳಿಂದ ಈವರೆವಿಗೂ ಉತ್ತರಿಸದೇ, ಬಾಕಿಯನ್ನು ಸಹಾ ಪಾವತಿಸದೇ ಸುಮಾರು ವರ್ಷಗಳಿಂದ ತಟಸ್ಥವಾಗಿರುವುದನ್ನು ಸಮಿತಿಯು ಗಮನಿಸಿ, ಅಸಮಾಧಾನ ವ್ಯಕ್ತಪಡಿಸಿತು. ಆಯುಕ್ತರಿಂದ ಸದರಿ ಸಂಸ್ಥೆಗಳ ಆಯಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸಂಪೂರ್ಣ ವಿವರಗಳನ್ನೊಳಗೊಂಡ ಅರೆ ಸರ್ಕಾರಿ ಪತ್ರವನ್ನು ಬರೆಯಲು ಅಗತ್ಯ ಕ್ರಮಕೈಗೊಳ್ಳಲು ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸಮಿತಿಯು ಸೂಚಿಸಿತು.

ಸದರಿ ಕಟ್ಟಡದಲ್ಲಿ ಹಾಲಿ ಖಾಲಿ ಇರುವ ಅಂತಸ್ತುಗಳನ್ನು ಏಕೆ ಖಾಲಿ ಬಿಡಲಾಗಿದೆ ಎಂದು ಪ್ರಶ್ನಿಸಿ, ಅಧಿಕಾರಿಗಳಿಂದ ಸಮಂಜಸವಾದ ಉತ್ತರ ಬಾರದ ಕಾರಣ ಅಸಮಾಧಾನ ವ್ಯಕ್ತಪಡಿಸಿದ ಸದಸ್ಯರು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕೂಡಲೇ ಟೆಂಡರ್ ಕರೆಯಲು ಅಗತ್ಯ ಕ್ರಮವಹಿಸುವಂತೆ ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸಮಿತಿಯು ಸೂಚಿಸಿತು.

ಪೂರ್ವ ಮಾರುಕಟ್ಟೆ ಸರ್ಕಾರಿ ಸಂಸ್ಥೆಗಳಿಂದ ಸುಮಾರು 6.47 ಕೋಟಿ, ಪಶ್ಚಿಮ ಮಾರುಕಟ್ಟೆ ವ್ಯಾಪ್ತಿಯಲ್ಲಿ ಸರ್ಕಾರಿ ಸಂಸ್ಥೆಗಳಿಂದ 45ಲಕ್ಷ, ದಕ್ಷಿಣ ಮಾರುಕಟ್ಟೆ ವ್ಯಾಪ್ತಿಯಲ್ಲಿ ಸರ್ಕಾರಿ ಸಂಸ್ಥೆಗಳಿಂದ 3.97ಕೋಟಿ ಪರವಾನಗಿ ಶುಲ್ಕವು ಬಾಕಿ ಹಾಗೂ ಗಾಂಧಿಬಜಾರ್ ಮಾರುಕಟ್ಟೆಯಿಂದ 37ಲಕ್ಷ ಬಾಕಿ, ಜಯ ಚಾಮರಾಜೇಂದ್ರ ಸಗಟು ತರಕಾರಿ ಮಾರುಕಟ್ಟೆ, ಕಲಾಸಿ ಪಾಳ್ಯ, ಇದರಿಂದ 1 ಕೋಟಿ ಬಾಕಿ ಇರುವುದನ್ನು ಸಮಿತಿಯು ಗಮನಿಸಿತು.

ಕಲಾಸಿಪಾಳ್ಯ ಮಾರುಕಟ್ಟೆಯ ಪರವಾನಗಿದಾರರು ಬಾಕಿ ಶುಲ್ಕವನ್ನು ತಕ್ಷಣ ಪಾವತಿ ಮಾಡದಿದ್ದಲ್ಲಿ ಕಾನೂನು ರೀತ್ಯ ಕ್ರಮ ಜರುಗಿಸಲು ಉಪ ಆಯುಕ್ತರು (ಮಾರುಕಟ್ಟೆ)ರವರಿಗೆ ಸಮಿತಿಯು ಸೂಚಿಸಿತು. ಈ ಎಲ್ಲಾ ಬಾಕಿಗಳನ್ನು 15 ದಿನಗಳೊಳಗಾಗಿ ವಸೂಲಿ ಮಾಡಿ, ಪಾಲಿಕೆಯ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ತರಲು ಪ್ರಯತ್ನಿಸಬೇಕೆಂದು ಹಾಜರಿದ್ದ ಎಲ್ಲ ಅಧಿಕಾರಿ ನೌಕರರಿಗೂ ಸೂಚಿಸಲಾಯಿತು.

ಮಾರುಕಟ್ಟೆ ಇಲಾಖೆಯಲ್ಲಿ ಪರವಾನಗಿ ಶುಲ್ಕ ಪಾವತಿಸದ ಪರವಾನಗಿದಾರರು ತಕ್ಷಣವೇ ಸ್ಥಳದಲ್ಲಿಯೇ ರಸೀದಿಯನ್ನು ನೀಡುವಂತೆ ಆಗ್ರಹಿಸುತ್ತಿರುವುದಾಗಿ, ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದ ಮೇರೆಗೆ ಈ ವಿಷಯವನ್ನು ಮಾಹಿತಿ ತಂತ್ರಜ್ಞಾನ ಸಲಹೆಗಾರರೊಂದಿಗೆ ಚರ್ಚಿಸಿ, ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ಹಾಗೂ ಮಾರುಕಟ್ಟೆ ಇಲಾಖೆಯ ಎಲ್ಲಾ ಹಂಚಿಕೆಯಿಂದ ಪರವಾನಗಿ ಶುಲ್ಕ ವಸೂಲಾತಿವರೆವಿಗೂ ಸಂಪೂರ್ಣ ವಿವರಗಳನ್ನು ಅಂತರ್ ಜಾಲದಲ್ಲಿ ಪ್ರಚುರಪಡಿಸಲು ಉಪ ಆಯುಕ್ತರು (ಮಾರುಕಟ್ಟೆ)ರವರಿಗೆ ಸೂಚಿಸಲಾಯಿತು.

ಸಾರ್ವಜನಿಕರಿಗೆ ಉಪಯುಕ್ತವಾಗದೇ, ಶಿಥಿಲಾವಸ್ಥೆಯಲ್ಲಿರುವ ಮಾರುಕಟ್ಟೆಗಳ ವಿಡಿಯೋ ಚಿತ್ರೀಕರಣ ನಡೆಸಿ ಸಂಪೂರ್ಣ ವಿವರಣೆಗಳುಳ್ಳ ಪವರ್ ಪಾಯಿಂಟ್ ಪ್ರೆಸೆಂಟೇಷನ್‌ನ್ನು ಸಾರ್ವಜನಿಕ ಸಂಪರ್ಕಾಧಿಕಾರಿಯೊಂದಿಗೆ ಚರ್ಚಿಸಿ ಸಿದ್ಧಪಡಿಸಲು ಈಗಾಗಲೇ ಸಮಿತಿಯು ಸೂಚಿಸಿರುವುದನ್ನು ಜರೂರಾಗಿ ಕ್ರಮವಹಿಸಲು ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸೂಚಿಸಲಾಯಿತು.

ಮಾರುಕಟ್ಟೆ ಇಲಾಖೆಯ ಆಡಳಿತಕ್ಕೆ ಸಂಬಂಧಪಟ್ಟಂತೆ, ಪಾಲಿಕೆಯ ಮಾರುಕಟ್ಟೆ ಇಲಾಖೆಯಲ್ಲಿ ಸುಮಾರು 40 ಕೋಟಿ ಪರವಾನಗಿ ಶುಲ್ಕ ಬಾಕಿ ಇದ್ದು, ಈ ಇಲಾಖೆಗೆ ಪ್ರತ್ಯೇಕವಾಗಿ ಹಿರಿಯ ಕೆ.ಎ.ಎಸ್.ಅಧಿಕಾರಿಯನ್ನು ಜಂಟಿ ಆಯುಕ್ತರು (ಮಾರುಕಟ್ಟೆ) ಆಗಿ ನೇಮಿಸಲು ಹಾಗೂ ಪರವಾನಗಿ ಶುಲ್ಕ ವಸೂಲಿ ಮಾಡುವ ಸಲುವಾಗಿ ಸಿಬ್ಬಂದಿ ಕೊರತೆ ಇರುವುದರಿಂದ ಪೂರ್ವ, ಪಶ್ಚಿಮ, ದಕ್ಷಿಣ ಪ್ರತಿ ವಲಯಗಳಿಂದ ಕಂದಾಯ ಪರಿವೀಕ್ಷಕರು, ಕಂದಾಯ ವಸೂಲಿಗಾರರು ಹಾಗೂ ಗುಮಾಸ್ತರನ್ನು ಬೇರೆ ಕಛೇರಿಗಳಿಗೆ ಓ.ಓ.ಡಿ.ಮೇಲೆ ನಿಯೋಜಿಸಿರುವ ಆದೇಶವನ್ನು ರದ್ದುಪಡಿಸಿ, ಹಾಲಿ ವೇತನ ಪಡೆಯುತ್ತಿರುವ ಮೂಲ ಸ್ಥಳದಲ್ಲಿಯೇ ಮುಂದುವರಿಸುವಂತೆ ಹಾಗೂ ಪ್ರತಿ ವಲಯಗಳಿಗೂ ಪ್ರಥಮ ದರ್ಜೆ ಸಹಾಯಕರು – 1, ದ್ವಿತೀಯ ದರ್ಜೆ ಸಹಾಯಕರು – 2. ನ್ನು ನೇಮಿಸುವಂತೆ ಈಗಾಗಲೇ ಅಧ್ಯಕ್ಷರು, ಆಯುಕ್ತರು ಮತ್ತು ಅಪರ ಆಯುಕ್ತರು(ಆಡಳಿತ)ರವರಿಗೆ ಟಿಪ್ಪಣಿ ಕಳುಹಿಸಿದ್ದು, ಈವರೆವಿಗೂ ಕ್ರಮ ಕೈಗೊಂಡಿರುವುದಿಲ್ಲವಾದರಿಂದ ಕೂಡಲೇ ಈ ಬಗ್ಗೆ ಗಮನಹರಿಸಿ, ಪಾಲಿಕೆ ಆರ್ಥಿಕ ಹಿತದೃಷ್ಟಿಯಿಂದ ಹಾಗೂ ಇಲಾಖೆಯ ಕಛೇರಿ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಆದೇಶ ಹೊರಡಿಸಿ, ಸಮಿತಿಯ ಗಮನಕ್ಕೆ ತರಲು ಜರೂರಾಗಿ ಕ್ರಮ ವಹಿಸುವಂತೆ ಉಪ ಆಯುಕ್ತರು (ಆಡಳಿತ) ರವರಿಗೆ ಸಮಿತಿಯು ಸೂಚಿಸಿತು.

ಬಾಕಿ ಉಳಿಸಿಕೊಂಡಿರುವ ಪರವಾನಗಿ ಶುಲ್ಕವನ್ನು 15 ದಿವಸಗಳೊಳಗಾಗಿ ವಸೂಲಿ ಮಾಡಿ, ಪಾಲಿಕೆಯ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ತರಲು ಪ್ರಯತ್ನಿಸಬೇಕೆಂದು ಹಾಜರಿದ್ದ ಎಲ್ಲ ಅಧಿಕಾರಿ ನೌಕರರಿಗೂ ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
( ವೈ.ಆರ್. ಗೌರಮ್ಮ )
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ.

ಪ್ರತಿಯನ್ನು :

1) ಪೂಜ್ಯ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ಕಳುಹಿಸಿದೆ.
4) ಮಾನ್ಯ ಆಡಳಿತ ಪಕ್ಷದ ನಾಯಕರು/ವಿರೋಧ ಪಕ್ಷದ ನಾಯಕರು,ರವರಿಗೆ ಕಳುಹಿಸಿದೆ.
5) ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಕಳುಹಿಸಲು ಕೋರಿದೆ.
6) ಅಪರ ಆಯುಕ್ತರು(ಹಣಕಾಸು–ಮಾರುಕಟ್ಟೆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7) ಅಪರ ಆಯುಕ್ತರು(ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಮುಖ್ಯ ಅಭಿಯಂತರರು(ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11) ಸಹ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಸಾರ್ವಜನಿಕ ಸಂಪರ್ಕಾಧಿಕಾರಿ ರವರು ಅಗತ್ಯ ಕ್ರಮ ಕೈಗೊಳ್ಳಲು ಕಳುಹಿಸಿದೆ.
13) ಮಾಹಿತಿ ತಂತ್ರಜ್ಞಾನ ಸಲಹೆಗಾರರು. ರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ಕಳುಹಿಸಿದೆ.
14) ಮಾರುಕಟ್ಟೆ ಸ್ಥಾಯಿ ಸಮಿತಿಯ ಮಾನ್ಯ ಸದಸ್ಯರು, ಶ್ರೀಯುತರುಗಳಾದ :

| | |
|---|---|
| ಬಿ.ಆರ್. ನಂಜುಂಡಪ್ಪ (ವಾರ್ಡ್ ನಂ.17) | ಲತಾ.ಕೆ (ವಾರ್ಡ್‌ನಂ.174), |
| ಸಿದ್ದಲಿಂಗಯ್ಯ (ಸಿದ್ದು)(ವಾರ್ಡ್‌ನಂ.87) | ಎಸ್. ಕ್ರಿಯಾ ಶೈಲಜ (ವಾರ್ಡ್ ನಂ.48), |
| ಶ್ರೀಮತಿ. ವಿಜಯ.ಎ (ವಾರ್ಡ್‌ನಂ.197) | ಎನ್. ಪಿಳ್ಳಪ್ಪ (ವಾರ್ಡ್ ನಂ.82), |
| ಗೀತಾ ಶ್ರೀನಿವಾಸರೆಡ್ಡಿ(ವಾರ್ಡ್ ನಂ.112) | ಮುನಿಸಂಜೀವಯ್ಯ (ವಾರ್ಡ್‌ನಂ.170) |
| ಎಲ್. ಶ್ರೀನಿವಾಸ್ (ವಾರ್ಡ್‌ನಂ.182), | ಕ್ವೀನ್ ಎಲಿಜಬೆತ್(ವಾರ್ಡ್‌ನಂ.96 ) ರವರಿಗೆ ಕಳುಹಿಸಿದೆ. |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 20–1–2014 ರಂದು ಮಾರುಕಟ್ಟೆ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ : | | ಹಾಜರಿದ್ದ ಅಧಿಕಾರಿಗಳು : |
|---|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು | ಉಪ ಆಯುಕ್ತರು(ಮಾರುಕಟ್ಟೆ) |
| ಬಿ.ಆರ್. ನಂಜುಂಡಪ್ಪ | ಸದಸ್ಯರು | ಸಹ ಕಂದಾಯ ಅಧಿಕಾರಿ (ಪೂರ್ವ–ಮಾರುಕಟ್ಟೆ) |
| ಸಿದ್ದಲಿಂಗಯ್ಯ (ಸಿದ್ದು) | ಸದಸ್ಯರು | ಸಹ ಕಂದಾಯ ಅಧಿಕಾರಿ(ಪಶ್ಚಿಮ–ಮಾರುಕಟ್ಟೆ) |
| ವಿಜಯ.ಎ | ಸದಸ್ಯರು | ಸಹ ಕಂದಾಯ ಅಧಿಕಾರಿ(ದಕ್ಷಿಣ–ಮಾರುಕಟ್ಟೆ) |
| ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | |
| ಎಲ್. ಶ್ರೀನಿವಾಸ್ | ಸದಸ್ಯರು | |
| ಲತಾ,ಕೆ | ಸದಸ್ಯರು | |
| ಎಸ್. ಕ್ರಿಯಾಶೈಲಜ | ಸದಸ್ಯರು | |
| ಎನ್. ಪಿಳ್ಳಪ್ಪ | ಸದಸ್ಯರು | |
| ಮುನಿಸಂಜೀವಯ್ಯ | ಸದಸ್ಯರು | |
| ಕ್ವೀನ್ ಎಲಿಜಬೆತ್ | ಸದಸ್ಯರು | |

*****

ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಮಾರುಕಟ್ಟೆ ಇಲಾಖೆ ವ್ಯಾಪ್ತಿಗೆ ಬರುವ ಪಾಲಿಕೆಯ ಮಾರುಕಟ್ಟೆಗಳಲ್ಲಿರುವ ಎಲ್ಲಾ ಮಳಿಗೆಗಳ ಪರವಾನಗಿ ಶುಲ್ಕದ ಪರಿಷ್ಕರಣೆಯ ಬಗ್ಗೆ ಚರ್ಚಿಸಲಾಯಿತು. ಸದರಿ ಮಳಿಗೆಗಳಿಗೆ ಬಹಳ ವರ್ಷಗಳಿಂದ ಕರಾರು ಪತ್ರ, ಪರವಾನಗಿ ನವೀಕರಣ ಆಗಿರುವುದಿಲ್ಲ. ನ್ಯೂನತೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಎಲ್ಲ ಮಾರುಕಟ್ಟೆಗಳ ಮಳಿಗೆಗಳ ಪರವಾನಗಿದಾರರಿಂದ ಹಂಚಿಕೆಯ ವಿವರಗಳನ್ನು ಹಾಗೂ ಕರಾರು ಪತ್ರವನ್ನು ಹಾಗೂ ಲಭ್ಯವಿರುವ ಇತರೆ ದಾಖಲೆಗಳನ್ನು ಪಡೆಯುವಂತೆ ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸೂಚಿಸಲಾಯಿತು.

ವಲಯ ವ್ಯಾಪ್ತಿಯಲ್ಲಿ ಬರುವ ಮಾರುಕಟ್ಟೆಗಳಿಗೆ ಹಾಲಿ ನಿಗಧಿಪಡಿಸಬಹುದಾದ ಪರವಾನಗಿ ಶುಲ್ಕದ ಕುರಿತು ಲೋಕೋಪಯೋಗಿ ಇಲಾಖೆಯ ಎಸ್.ಆರ್ ದರದ ಲೆಕ್ಕಾಚಾರ ಮಾಡಿ, ಮಾರುಕಟ್ಟೆ ಇಲಾಖೆಗೆ ಜರೂರಾಗಿ ಒದಗಿಸುವಂತೆ ಹಾಜರಿದ್ದ ವಲಯಗಳ ಯೋಜನಾ ವಿಭಾಗದ ಅಭಿಯಂತರರುಗಳಿಗೆ ಸೂಚಿಸಲಾಯಿತು.

ಪಾಲಿಕೆಯ ಜಿಂಕೆ ಉದ್ಯಾನವನದ ಬಳಿ ಇರುವ ಮಳಿಗೆಗಳು ಸುಮಾರು 10ವರ್ಷಗಳಿಂದ ಖಾಲಿ ಇರುವುದಾಗಿ ಅಧಿಕಾರಿಗಳು ತಿಳಿಸಿದರು. ಇದಕ್ಕೆ ಸಂಬಂಧಿಸಿದ ಕಡತವನ್ನು ಸಮಿತಿಗೆ ಪರಿಶೀಲನೆಗಾಗಿ ಒದಗಿಸುವಂತೆ ಸೂಚಿಸಲಾಯಿತು. ಅವಲಹಳ್ಳಿ ಬಿ.ಡಿ.ಎ.ಪಾರ್ಕ್ ಎದುರು ಇರುವ ಪಾಲಿಕೆಯ ಸಮುದಾಯ ಭವನದ ಆವರಣದಲ್ಲಿ ನಿರ್ಮಿಸಲಾಗಿರುವ 8 ಮಳಿಗೆಗಳು 4 ವರ್ಷಗಳಿಂದ ಖಾಲಿ ಇರುವುದಾಗಿ ಅಧಿಕಾರಿಗಳು ತಿಳಿಸಿದರು. ವಿಳಂಬದ ಬಗ್ಗೆ ಪ್ರಶ್ನಿಸಲಾಗಿ, ವಿದ್ಯತ್ ಸಂಪರ್ಕಕ್ಕೆ ಸಂಬಂಧಪಟ್ಟಂತೆ ಕಡತವು ವ್ಯವಹರಣೆಯಲ್ಲಿದ್ದುದರಿಂದ ಹಾಗೂ ವಿದ್ಯುತ್ ಸಂಪರ್ಕ ಒದಗಿಸಲು ವಿಳಂಬವಾಗಿರುವುದಾಗಿ, ತಿಳಿಸಿದರು. ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕೂಡಲೇ ಸದರಿ ಮಳಿಗೆಗಳನ್ನು ಹಂಚಿಕೆ ಮಾಡುವ ಕುರಿತು ಪ್ರಕ್ರಿಯೆಯನ್ನು ಜರೂರಾಗಿ ಕೈಗೊಳ್ಳಲು ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸೂಚಿಸಲಾಯಿತು.

ವಸಂತನಗರದಲ್ಲಿ ನೂತನವಾಗಿ ನಿರ್ಮಿಸಿರುವ ಪಾಲಿಕೆಯ ಮಾರುಕಟ್ಟೆಯು ಇನ್ನು ಕಾಮಗಾರಿ ಇಲಾಖೆಯಿಂದ ಮಾರುಕಟ್ಟೆ ಇಲಾಖೆಗೆ ಹಸ್ತಾಂತರ ಮಾಡದೇ ಇರುವುದರಿಂದ ಮಾರುಕಟ್ಟೆ ಇಲಾಖೆಯಲ್ಲಿ ಹಂಚಿಕೆ ಪ್ರಕ್ರಿಯೆಯನ್ನು ಮಾಡಲು ಸಾದ್ಯವಾಗಿರುವುದಿಲ್ಲವೆಂದು ಅಧಿಕಾರಿಗಳು ಸಮಿತಿಯ ಗಮನಕ್ಕೆ ತಿಳಿಸಿದರು. ಈ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಸಮಿತಿಯ ಸದಸ್ಯರು ಇನ್ನು ಮುಂದೆಯಾದರೂ ಬೇಜವಾಬ್ದಾರಿತನವನ್ನು ಬಿಟ್ಟು, ಗಂಭೀರವಾಗಿ ಕರ್ತವ್ಯವನ್ನು ನಿರ್ವಹಿಸಲು ಸೂಚಿಸುತ್ತಾ, ಸದರಿ ಮಾರುಕಟ್ಟೆಯನ್ನು ಅಗತ್ಯ ಸೌಲಭ್ಯಗಳೊಂದಿಗೆ ಮಾರುಕಟ್ಟೆ ಇಲಾಖೆಗೆ ಹಸ್ತಾಂತರಿಸುವ ಕುರಿತು ಜರೂರಾಗಿ ಕ್ರಮ ಕೈಗೊಳ್ಳಲು ಹಾಜರಿದ್ದ ಅಭಿಯಂತರರಿಗೆ ಸೂಚಿಸಲಾಯಿತು.

. . . .2

ಪಾಲಿಕೆಯ ವಾಣಿಜ್ಯ ಸಂಕೀರ್ಣಗಳಲ್ಲಿರುವ ಸರ್ಕಾರಿ ಸಂಸ್ಥೆಗಳು ಸಹ ಹೆಚ್ಚಿನ ಪರವಾನಗಿ ಶುಲ್ಕವನ್ನು ಬಾಕಿ ಉಳಿಸಿಕೊಂಡಿರುವುದು ಅಧಿಕಾರಿಗಳು ಒದಗಿಸಿರುವ ಮಾಹಿತಿಗಳಲ್ಲಿ ಕಂಡುಬಂದಿದ್ದು, ಈ ನಿಟ್ಟಿನಲ್ಲಿ ಪರವಾನಗಿ ಶುಲ್ಕ ವಸೂಲಾತಿಯ ಬಗ್ಗೆ ತ್ವರಿತವಾಗಿ ಕಾನೂನು ರೀತ್ಯಾ ತಿಳುವಳಿಕೆ ಪತ್ರಗಳು ಹಾಗೂ ಅರೆ ಸರ್ಕಾರಿ ಪತ್ರಗಳನ್ನು ಅಯಾ ಇಲಾಖೆಗಳಿಗೆ ಕಳುಹಿಸಲು ಅಗತ್ಯ ಕ್ರಮ ವಹಿಸುವಂತೆ ಕಂದಾಯ ಅಧಿಕಾರಿ(ಮಾರುಕಟ್ಟೆ)ರವರಿಗೆ ಸೂಚಿಸಲಾಯಿತು.

ಮಳಿಗೆಗಳ ಕುರಿತು ಬಾಕಿ ಇರುವ ಘನ ನ್ಯಾಯಾಲಯಗಳಲ್ಲಿನ ಪ್ರಕರಣಗಳ ಕುರಿತಂತೆ ಅಧಿಕಾರಿಗಳು ಅಗ್ಗಿಂದಾಗ್ಗೆ ಗಮನಿಸುತ್ತಾ. ಪ್ರಕರಣಗಳು ಇತ್ಯರ್ಥವಾಗಲು ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಯಿತು.

ಸದರಿ ಕಟ್ಟಡದಲ್ಲಿ ಹಾಲಿ ಖಾಲಿ ಇರುವ ಅಂತಸ್ತುಗಳನ್ನು ಏಕೆ ಖಾಲಿ ಬಿಡಲಾಗಿದೆ ಎಂದು ಪ್ರಶ್ನಿಸಿ, ಅಧಿಕಾರಿಗಳಿಂದ ಸಮಂಜಸವಾದ ಉತ್ತರ ಬಾರದ ಕಾರಣ ಅಸಮಾಧಾನ ವ್ಯಕ್ತಪಡಿಸಿದ ಸದಸ್ಯರು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕೂಡಲೇ ಟೆಂಡರ್ ಕರೆಯಲು ಅಗತ್ಯ ಕ್ರಮವಹಿಸುವಂತೆ ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸಮಿತಿಯು ಸೂಚಿಸಿತು.

ಪರವಾನಗಿ ಶುಲ್ಕದ ವಸೂಲಾತಿ ಬಗ್ಗೆ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಸೇರಿ ಕ್ರಮವಹಿಸಲು ಮತ್ತೊಮ್ಮೆ ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
( ವೈ.ಆರ್. ಗೌರಮ್ಮ )
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ.

ಪ್ರತಿಯನ್ನು :

1) ಪೂಜ್ಯ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ಕಳುಹಿಸಿದೆ.
4) ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಕಳುಹಿಸಲು ಕೋರಿದೆ.
5) ಮಾನ್ಯ ಆಡಳಿತ ಪಕ್ಷದ ನಾಯಕರು/ವಿರೋಧ ಪಕ್ಷದ ನಾಯಕರು,ರವರಿಗೆ ಕಳುಹಿಸಿದೆ.
6) ಅಪರ ಆಯುಕ್ತರು(ಹಣಕಾಸು–ಮಾರುಕಟ್ಟೆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7) ಅಪರ ಆಯುಕ್ತರು(ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಕಾನೂನು ಕೋಷದ ಮುಖ್ಯಸ್ಥರು ಅಗತ್ಯಕ್ರಮ ಕೈಗೊಳ್ಳಲು ಕಳುಹಿಸಿದೆ.
9) ಮುಖ್ಯ ಅಭಿಯಂತರರು(ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಸಹ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13) ಮಾಹಿತಿ ತಂತ್ರಜ್ಞಾನ ಸಲಹೆಗಾರರು, ರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ಕಳುಹಿಸಿದೆ.
14) ಮಾರುಕಟ್ಟೆ ಸ್ಥಾಯಿ ಸಮಿತಿಯ ಮಾನ್ಯ ಸದಸ್ಯರು, ಶ್ರೀಯುತರುಗಳಾದ :

ಬಿ.ಆರ್. ನಂಜುಂಡಪ್ಪ (ವಾರ್ಡ್ ನಂ.17)
ಸಿದ್ದಲಿಂಗಯ್ಯ (ಸಿದ್ದು)(ವಾರ್ಡ್‌ನಂ.87)
ಶ್ರೀಮತಿ. ವಿಜಯ.ಎ (ವಾರ್ಡ್‌ನಂ.197)
ಗೀತಾ ಶ್ರೀನಿವಾಸರೆಡ್ಡಿ(ವಾರ್ಡ್ ನಂ.112)
ಎಲ್. ಶ್ರೀನಿವಾಸ್ (ವಾರ್ಡ್‌ನಂ.182),
ಲತಾ.ಕೆ (ವಾರ್ಡ್‌ನಂ.174),
ಎಸ್. ಕ್ರಿಯಾ ಶೈಲಜ (ವಾರ್ಡ್ ನಂ.48),
ಎನ್. ಪಿಳ್ಳಪ್ಪ (ವಾರ್ಡ್ ನಂ.82),
ಮುನಿಸಂಜೀವಯ್ಯ (ವಾರ್ಡ್‌ನಂ.170)
ಕ್ವೀನ್‌ಎಲಿಜಬೆತ್(ವಾರ್ಡ್‌ನಂ.96) ರವರಿಗೆ ಕಳುಹಿಸಿದೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 24-1-2014 ರಂದು ನಡೆದ ಮಾರುಕಟ್ಟೆ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು<br>ಶ್ರೀಯುತರುಗಳಾದ : | | ಹಾಜರಿದ್ದ ಅಧಿಕಾರಿಗಳು : |
|---|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು | ಉಪ ಆಯುಕ್ತರು(ಮಾರುಕಟ್ಟೆ) |
| ಬಿ.ಆರ್. ನಂಜುಂಡಪ್ಪ | ಸದಸ್ಯರು | ಸಹ ಕಂದಾಯ ಅಧಿಕಾರಿ (ಪೂರ್ವ-ಮಾರುಕಟ್ಟೆ) |
| ಸಿದ್ದಲಿಂಗಯ್ಯ (ಸಿದ್ದು) | ಸದಸ್ಯರು | ಸಹ ಕಂದಾಯ ಅಧಿಕಾರಿ(ಪಶ್ಚಿಮ-ಮಾರುಕಟ್ಟೆ) |
| ವಿಜಯ.ಎ | ಸದಸ್ಯರು | ಸಹ ಕಂದಾಯ ಅಧಿಕಾರಿ(ದಕ್ಷಿಣ-ಮಾರುಕಟ್ಟೆ) |
| ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | |
| ಎಲ್. ಶ್ರೀನಿವಾಸ್ | ಸದಸ್ಯರು | |
| ಲತಾ.ಕೆ | ಸದಸ್ಯರು | |
| ಎಸ್. ಕ್ರಿಯಾಶೈಲಜ | ಸದಸ್ಯರು | |
| ಎನ್. ಪಿಳ್ಳಪ್ಪ | ಸದಸ್ಯರು | |
| ಮುನಿಸಂಜೀವಯ್ಯ | ಸದಸ್ಯರು | |
| ಕ್ವೀನ್ ಎಲಿಜಬೆತ್ | ಸದಸ್ಯರು | |

( ಹಿಂದಿನ ಸಭೆಯ ನಡವಳಿಯನ್ನು ಓದಿ ದಾಖಲಿಸಿಕೊಳ್ಳಲಾಯಿತು)

ಆಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಪರವಾನಗಿ ಶುಲ್ಕದ ವಸೂಲಾತಿಯ ಸುಧಾರಣೆಯ ಬಗ್ಗೆ ಚರ್ಚಿಸಲಾಯಿತು. ವಸೂಲಾತಿ ಅಗುತ್ತಿರುವ ಮೊತ್ತ ಬಹಳ ಕಡಿಮೆ ಇದ್ದು, ಈ ನಿಟ್ಟಿನಲ್ಲಿ ಕಂದಾಯ ವಸೂಲಿಗಾರರು, ಕಂದಾಯ ಪರಿವೀಕ್ಷಕರು, ಮೌಲ್ಯಮಾಪಕರು ಮತ್ತು ಸಹ ಕಂದಾಯ ಅಧಿಕಾರಿಗಳು ಒಡಗೂಡಿ, ವಸೂಲಾತಿಯನ್ನು ವೃದ್ದಿಸುವ ನಿಟ್ಟಿನಲ್ಲಿ ಶ್ರಮಿಸಬೇಕೆಂದು ಸೂಚಿಸಲಾಯಿತು.

ಪಾಲಿಕೆಯ ಮಾರುಕಟ್ಟೆ ಇಲಾಖೆಯ ವ್ಯಾಪ್ತಿಗೆ ಎಲ್ಲಾ ಮಾರುಕಟ್ಟೆಗಳ, ವಾಣಿಜ್ಯ ಸಂಕೀರ್ಣಗಳಲ್ಲಿರುವ ಮಳಿಗೆಗಳನ್ನು ಕಂಪ್ಯೂಟರಿಕರಿಸಿ ಪರವಾನಗಿ ಶುಲ್ಕವನ್ನು ಅನ್ ಲೈನ್ ಮುಖಾಂತರ ಪಾವತಿಸುವ ವ್ಯವಸ್ಥೆಯನ್ನು ಪಿ.ಐ.ಡಿ.ಮಾದರಿಯಲ್ಲಿ ಅನುಷ್ಠಾನಗೊಳಿಸುವುದು ಅವಶ್ಯವೆಂದು ಸಮಿತಿಯು ಅಭಿಪ್ರಾಯಿಸಿ, ಈ ಬಗ್ಗೆ ಚರ್ಚಿಸುವ ಸಲುವಾಗಿ ಪಾಲಿಕೆಯ ಮಾಹಿತಿ ತಂತ್ರ ಜ್ಞಾನರನ್ನು ಸಭೆಗೆ ಕರೆಯಿಸಿ, ಈ ಬಗ್ಗೆ ಕ್ರಮವಹಿಸಬಹುದಾದ ರೂಪುರೇಷಗಳ ಬಗ್ಗೆ ಚರ್ಚಿಸಲಾಯಿತು. ಚರ್ಚೆಯ ನಂತರ ಮಾಹಿತಿ ತಂತ್ರ ಜ್ಞಾನ ವಿಭಾಗಕ್ಕೆ ಅಗತ್ಯವಿರುವ ಎಲ್ಲಾ ಮಳಿಗೆಗಳ ಮಾಹಿತಿಗಳನ್ನು ಒದಗಿಸುವಂತೆ ಉಪ ಆಯುಕ್ತರು(ಮಾರುಕಟ್ಟೆ)ರವರಿಗೆ ಸೂಚಿಸಲಾಯಿತು. ಈ ಬಗ್ಗೆ 10 ರಿಂದ 15 ದಿನಗಳೊಳಗಾಗಿ ಕ್ರಮವಹಿಸಿ, ಸಮಿತಿಯ ಗಮನಕ್ಕೆ ತರಲಾಗುವುದೆಂದು ಮಾಹಿತಿ ತಂತ್ರ ಜ್ಞಾನ ಸಲಹೆಗಾರರು ಸಮಿತಿಗೆ ತಿಳಿಸಿದರು.

ವಾಣಿಜ್ಯ ಸಂಕೀರ್ಣಗಳಲ್ಲಿನ ಸರ್ಕಾರಿ ಸಂಸ್ಥೆಗಳಿಗೆ ಬಾಕಿ ಪರವಾನಗಿ ಶುಲ್ಕವನ್ನು ಪಾವತಿಸುವಂತೆ ತಿಳುವಳಿಕೆ ಪತ್ರವನ್ನು ಜಾರಿಗೊಳಿಸಲಾಯಿತೆ, ಎಂದು ಪ್ರಶ್ನಿಸಲಾಯಿತು. ಜಾರಿಗೊಳಿಸಲಾಗಿದೆ ಎಂದು ಹಾಜರಿದ್ದ ಅಧಿಕಾರಿಗಳು ತಿಳಿಸಿದರು. ಈ ಬಗ್ಗೆ ಅಗ್ಗಿಂದಾಗ್ಗೆ ಗಮನಹರಿಸಿ, ಪಾಲಿಕೆಗೆ ಬಾಕಿ ಮೊತ್ತ ವಸೂಲಿಯಾಗುವ ನಿಟ್ಟಿನಲ್ಲಿ ಅಯಾ ಸಂಸ್ಥೆಯ ಮುಖ್ಯಸ್ಥರುಗಳನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡಲು ಸೂಚಿಸಿ, ತಪ್ಪಿದ್ದಲ್ಲಿ ಕಾನೂನು ರೀತ್ಯಾ ಕ್ರಮವಹಿಸುವಂತೆ ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
( ವೈ.ಆರ್. ಗೌರಮ್ಮ )
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ.

**ಪ್ರತಿಯನ್ನು :**

1) ಪೂಜ್ಯ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ಕಳುಹಿಸಿದೆ.
4) ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಕಳುಹಿಸಲು ಕೋರಿದೆ.
5) ಮಾನ್ಯ ಆಡಳಿತ ಪಕ್ಷದ ನಾಯಕರು/ವಿರೋಧ ಪಕ್ಷದ ನಾಯಕರು,ರವರಿಗೆ ಕಳುಹಿಸಿದೆ.
6) ಅಪರ ಆಯುಕ್ತರು(ಹಣಕಾಸು-ಮಾರುಕಟ್ಟೆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7) ಅಪರ ಆಯುಕ್ತರು(ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10) ಸಹ ಕಂದಾಯ ಅಧಿಕಾರಿ (ಮಾರುಕಟ್ಟೆ-ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11) ಮಾಹಿತಿ ತಂತ್ರಜ್ಞಾನ ಸಲಹೆಗಾರರು, ರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ಕಳುಹಿಸಿದೆ.
12) ಮಾರುಕಟ್ಟೆ ಸ್ಥಾಯಿ ಸಮಿತಿಯ ಎಲ್ಲಾ ಮಾನ್ಯ ಸದಸ್ಯರು, ಶ್ರೀಯುತರುಗಳಾದ :

| | |
|---|---|
| ಬಿ.ಆರ್. ನಂಜುಂಡಪ್ಪ (ವಾರ್ಡ್ ನಂ.17) | ಲತಾ.ಕೆ (ವಾರ್ಡ್‌ನಂ.174), |
| ಸಿದ್ದಲಿಂಗಯ್ಯ (ಸಿದ್ದು)(ವಾರ್ಡ್‌ನಂ.87) | ಎಸ್. ಕ್ರಿಯಾ ಶೈಲಜ (ವಾರ್ಡ್ ನಂ.48), |
| ಶ್ರೀಮತಿ. ವಿಜಯ.ಎ (ವಾರ್ಡ್‌ನಂ.197) | ಎನ್. ಪಿಳ್ಳಪ್ಪ (ವಾರ್ಡ್ ನಂ.82), |
| ಗೀತಾ ಶ್ರೀನಿವಾಸರೆಡ್ಡಿ(ವಾರ್ಡ್ ನಂ.112) | ಮುನಿಸಂಜೀವಯ್ಯ (ವಾರ್ಡ್‌ನಂ.170) |
| ಎಲ್. ಶ್ರೀನಿವಾಸ್ (ವಾರ್ಡ್‌ನಂ.182), | ಕ್ವೀನ್‌ಎಲಿಜಬೆತ್(ವಾರ್ಡ್‌ನಂ.96) ರವರಿಗೆ ಕಳುಹಿಸಿದೆ. |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 31-1-2014 ರಂದು ಮಾರುಕಟ್ಟೆ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು

ಹಾಜರಿದ್ದ ಸದಸ್ಯರುಗಳು
ಶ್ರೀಯುತರುಗಳಾದ :

| | |
|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು |
| ಬಿ.ಆರ್. ನಂಜುಂಡಪ್ಪ | ಸದಸ್ಯರು |
| ಸಿದ್ಧಲಿಂಗಯ್ಯ (ಸಿದ್ದು) | ಸದಸ್ಯರು |
| ವಿಜಯ.ಎ | ಸದಸ್ಯರು |
| ಲತಾ.ಕೆ | ಸದಸ್ಯರು |
| ಎಸ್. ಕ್ರಿಯಾಶೈಲಜ | ಸದಸ್ಯರು |
| ಎನ್. ಪಿಳ್ಳಪ್ಪ | ಸದಸ್ಯರು |
| ಮುನಿಸಂಜೀವಯ್ಯ | ಸದಸ್ಯರು |
| ಕ್ವೀನ್ ಎಲಿಜಬೆತ್ | ಸದಸ್ಯರು |

ಹಾಜರಿದ್ದ ಅಧಿಕಾರಿಗಳು :

ಉಪ ಆಯುಕ್ತರು(ಮಾರುಕಟ್ಟೆ)
ಅಧಿಕ ಕೌನ್ಸಿಲ್ ಕಾರ್ಯದರ್ಶಿ
ಸಹ ಕಂದಾಯ ಅಧಿಕಾರಿ (ಪೂರ್ವ-ಮಾರುಕಟ್ಟೆ)
ಸಹ ಕಂದಾಯ ಅಧಿಕಾರಿ(ಪಶ್ಚಿಮ-ಮಾರುಕಟ್ಟೆ)
ಸಹ ಕಂದಾಯ ಅಧಿಕಾರಿ(ದಕ್ಷಿಣ-ಮಾರುಕಟ್ಟೆ)

**ವಿಷಯದ ಸಂಖ್ಯೆ: ಮಾ.ಸ್ಥಾ.ಸ/ 8 /2013-14**

ಮಹಾತ್ಮಗಾಂಧಿ ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರಬೋಸ್(ಪಿ.ಯು.ಬಿ)ಕಟ್ಟಡದ ತಳ ಅಂತಸ್ತು ಮತ್ತು ನೆಲ ಅಂತಸ್ತಿನ ಹೊರಭಾಗದಲ್ಲಿ ನಕ್ಷೆಯಲ್ಲಿ ತೋರಿಸಿರುವಂತೆ ಶಂಕರ್‌ನಾಗ್ ಚಿತ್ರಮಂದಿರಕ್ಕೆ ಮೀಸಲಿಟ್ಟಿರುವ ಜಾಗವನ್ನು ಹೊರತುಪಡಿಸಿ, ಉಳಿದ ಜಾಗಕ್ಕೆ ಪಾವತಿ ಮತ್ತು ನಿಲುಗಡೆ ಶುಲ್ಕ ವಸೂಲಾತಿ ಮಾಡಲು ಈ ಹಿಂದೆ ಇ-ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚಿನ ಬಿಡ್‌ದಾರರಾದ ಶ್ರೀ.ಎಂ.ಲಿಂಗರಾಜುರವರಿಗೆ ದಿನಾಂಕ: 14-02-2013 ರಿಂದ 13-02-2014 ರವರೆಗೆ 1 ವರ್ಷದ ಅವಧಿಗೆ ರೂ.19,01,504/-(ಹತ್ತೊಂಭತ್ತು ಲಕ್ಷದ ಒಂದು ಸಾವಿರದ ಐದುನೂರ ನಾಲ್ಕು ರೂಪಾಯಿ) ಗಳಿಗೆ ನೀಡಲಾಗಿತ್ತು.

ಸದರಿ ಗುತ್ತಿಗೆ ಅವಧಿಯು 13-02-2014 ಕ್ಕೆ ಮುಕ್ತಾಯವಾಗುವುದರಿಂದ ಮುಂದಿನ ಅವಧಿಗೆ ಇ-ಟೆಂಡರ್ ಕಮ್ ಇ-ಹರಾಜು ಮುಖಾಂತರ ಟೆಂಡರ್ ಕರೆಯಬೇಕಾಗಿರುತ್ತದೆ. ಆದ್ದರಿಂದ ಮುಂದಿನ 3 ವರ್ಷಗಳ ಅವಧಿಗೆ ಈ ಕೆಳಕಂಡ ವಿವರದಂತೆ ಪಾವತಿ ಮತ್ತು ನಿಲುಗಡೆ ಶುಲ್ಕವನ್ನು ವಿಧಿಸಿ ವಸೂಲಾತಿ ಮಾಡಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ನಿಲುಗಡೆ ಸಮಯ | ಸೈಕಲ್ | ದ್ವಿಚಕ್ರ ವಾಹನ | ಮೂರು/ನಾಲ್ಕು ಚಕ್ರದ ವಾಹನ |
|---|---|---|---|---|
| 01 | 0 ರಿಂದ 2 ಗಂಟೆಯವರೆಗೆ | ರೂ.2-00 | ರೂ.5-00 | ರೂ.10-00 |
| 02 | 2 ರಿಂದ 4 ಗಂಟೆಯವರೆಗೆ | ರೂ.3-00 | ರೂ.10-00 | ರೂ.20-00 |
| 03 | 4 ರಿಂದ 10 ಗಂಟೆಯವರೆಗೆ | ರೂ.5-00 | ರೂ.20-00 | ರೂ.40-00 |
| 04 | 10 ರಿಂದ 16 ಗಂಟೆಯವರೆಗೆ | ರೂ.10-00 | ರೂ.30-00 | ರೂ.60-00 |
| 05 | 16 ರಿಂದ 24 ಗಂಟೆಯವರೆಗೆ | ರೂ.15-00 | ರೂ.40-00 | ರೂ.100-00 |

ಆದ್ದರಿಂದ ಮುಂದಿನ 3 (ಮೂರು) ವರ್ಷಗಳ ಅವಧಿಗೆ ನಕ್ಷೆಯಲ್ಲಿ ತೋರಿಸಿರುವಂತೆ ಶಂಕರ್‌ನಾಗ್ ಚಿತ್ರಮಂದಿರಕ್ಕೆ ಮೀಸಲಿಟ್ಟಿರುವ ಜಾಗವನ್ನು ಹೊರತುಪಡಿಸಿ ಉಳಿದ ಜಾಗಕ್ಕೆ ಇ-ಟೆಂಡರ್ ಕಮ್ ಇ-ಹರಾಜು ಮುಖಾಂತರ ಟೆಂಡರ್ ಕರೆಯಲು ಮಾರುಕಟ್ಟೆ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ದಿನಾಂಕ: 11-1-2014ರ ಆಯುಕ್ತರ ಟಿಪ್ಪಣಿ.

**ನಿರ್ಣಯ :** ಆಯುಕ್ತರ ದಿನಾಂಕ: 11/1/2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

ಸಹಿ/-
(ವೈ.ಆರ್.ಗೌರಮ್ಮ)
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ

**ಪ್ರತಿಯನ್ನು :**

1) ಪೂಜ್ಯ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ಕಳುಹಿಸಿದೆ.
4) ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ. ಕಳುಹಿಸಲು ಕೋರಿದೆ.
5) ಆಡಳಿತ ಪಕ್ಷದ ನಾಯಕರು / ವಿರೋಧ ಪಕ್ಷದ ನಾಯಕರು. ರವರಿಗೆ ಕಳುಹಿಸಿದೆ.
6) ಅಪರ ಆಯುಕ್ತರು(ಹಣಕಾಸು-ಮಾರುಕಟ್ಟೆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7) ಮುಖ್ಯ ಅಭಿಯಂತರರು(ಮಾರುಕಟ್ಟೆ) ರವರಿಗೆ ಕಳುಹಿಸಿದೆ.
8) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10) ಸಹ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11) ಮಾಹಿತಿ ತಂತ್ರಜ್ಞಾನ ಸಲಹೆಗಾರರು, ರವರಿಗೆ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕಳುಹಿಸಿದೆ.
12) ಮಾರುಕಟ್ಟೆ ಸ್ಥಾಯಿ ಸಮಿತಿಯ ಎಲ್ಲಾ ಮಾನ್ಯ ಸದಸ್ಯರು, ಶ್ರೀಯುತರುಗಳಾದ :

| | |
|---|---|
| ಬಿ.ಆರ್. ನಂಜುಂಡಪ್ಪ (ವಾರ್ಡ್ ನಂ.17) | ಲತಾ.ಕೆ (ವಾರ್ಡ್‌ನಂ.174), |
| ಸಿದ್ದಲಿಂಗಯ್ಯ (ಸಿದ್ದು)(ವಾರ್ಡ್‌ನಂ.87) | ಎಸ್. ಕ್ರಿಯಾ ಶೈಲಜ (ವಾರ್ಡ್ ನಂ.48), |
| ಶ್ರೀಮತಿ. ವಿಜಯ.ಎ (ವಾರ್ಡ್‌ನಂ.197) | ಎನ್. ಪಿಳ್ಳಪ್ಪ (ವಾರ್ಡ್ ನಂ.82), |
| ಗೀತಾ ಶ್ರೀನಿವಾಸರೆಡ್ಡಿ(ವಾರ್ಡ್ ನಂ.112) | ಮುನಿಸಂಜೀವಯ್ಯ (ವಾರ್ಡ್‌ನಂ.170) |
| ಎಲ್. ಶ್ರೀನಿವಾಸ್ (ವಾರ್ಡ್‌ನಂ.182), | ಕ್ವೀನ್‌ಎಲಿಜಬೆತ್(ವಾರ್ಡ್‌ನಂ.96) ರವರಿಗೆ ಕಳುಹಿಸಿದೆ. |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಜಂಟಿ ಸಮಿತಿಯಲ್ಲಿ

## ದಿನಾಂಕ: 16-1-2014 ಮತ್ತು ದಿನಾಂಕ: 4-2-2014ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ : | | | | ಹಾಜರಿದ್ದ ಅಧಿಕಾರಿಗಳು : |
|---|---|---|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು | ಡಾ: ಎ.ಎಸ್. ಶಿವಪ್ರಸಾದ್ | ಅಧ್ಯಕ್ಷರು | ವಿಶೇಷ ಆಯುಕ್ತರು (ಯೋಜನೆ) |
| ಬಿ.ಆರ್. ನಂಜುಂಡಪ್ಪ | ಸದಸ್ಯರು | ಎಂ.ಇ.ಪಿಳ್ಳಪ್ಪ | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಸಿದ್ದಲಿಂಗಯ್ಯ (ಸಿದ್ದು) | ಸದಸ್ಯರು | ವೀಣಾ ನಾಗರಾಜು | ಸದಸ್ಯರು | ಉಪ ಆಯುಕ್ತರು(ಮಾರುಕಟ್ಟೆ) |
| ವಿಜಯ.ಎ | ಸದಸ್ಯರು | ಗಂಗಾಧರ.ಹೆಚ್.ಎನ್ | ಸದಸ್ಯರು | ಕಾನೂನು ಕೋಶದ ಮುಖ್ಯಸ್ಥರು |
| ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | ಬಿ.ಎಸ್. ಆನಂದ್ | ಸದಸ್ಯರು | ಕಂದಾಯ ಅಧಿಕಾರಿ |
| ಎಲ್. ಶ್ರೀನಿವಾಸ್ | ಸದಸ್ಯರು | ಕೃಷ್ಣ. ವಿ | ಸದಸ್ಯರು | ಸಹಾಯಕ ನಿಯಂತ್ರಕರು (ಹಣಕಾಸು) |
| ಲತಾ.ಕೆ | ಸದಸ್ಯರು | ಸಂಪತ್‌ರಾಜ್. ಆರ್ | ಸದಸ್ಯರು | ಸ.ಕಾ.ಅಭಿಯಂತರರು(ಯೋಜನೆ-ದಕ್ಷಿಣ) |
| ಎಸ್. ಕ್ರಿಯಾಶೈಲಜ | ಸದಸ್ಯರು | ಗೋವಿಂದರಾಜು.ಎನ್ | ಸದಸ್ಯರು | ಸಹ ಕಂದಾಯ ಅಧಿಕಾರಿ (ಪೂರ್ವ-ಮಾರುಕಟ್ಟೆ) |
| ಎನ್. ಪಿಳ್ಳಪ್ಪ | ಸದಸ್ಯರು | ಉದಯಕುಮಾರ್.ಆರ್ | ಸದಸ್ಯರು | ಸಹ ಕಂದಾಯ ಅಧಿಕಾರಿ(ಪಶ್ಚಿಮ-ಮಾರುಕಟ್ಟೆ) |
| ಮುನಿಸಂಜೀವಯ್ಯ | ಸದಸ್ಯರು | ಸರಳ | ಸದಸ್ಯರು | |
| ಕ್ವೀನ್ ಎಲಿಜಬೆತ್ | ಸದಸ್ಯರು | ಸಿ.ಎಸ್. ರಾಧಾಕೃಷ್ಣ | ಸದಸ್ಯರು | |

( ಹಿಂದಿನ ಸಭೆಯ ನಡವಳಿಯನ್ನು ಓದಿ ದಾಖಲಿಸಿಕೊಳ್ಳಲಾಯಿತು)

**ವಿಷಯದ ಸಂಖ್ಯೆ: ಮಾ.ಸ್ಥಾ.ಸ/ 7 /2013-14**

ಮಾರುಕಟ್ಟೆ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರು ಪಾಲಿಕೆ ಮಾರುಕಟ್ಟೆಗಳ ಸ್ಥಳ ತಪಾಸಣೆ ನಡೆಸಿದಾಗ ಪಾಲಿಕೆ ಮಾರುಕಟ್ಟೆ ಮಳಿಗೆಗಳಿಗೆ ವಿಧಿಸಿರುವ ಪರವಾನಗಿ ಶುಲ್ಕವು ಬೇರೆ ವಾಣಿಜ್ಯ ಕಟ್ಟಡಗಳ ಮಳಿಗೆಗಳ ಮಾಲೀಕರು ವಸೂಲಿ ಮಾಡುತ್ತಿರುವ ಬಾಡಿಗೆಗೆ ಹೋಲಿಸಿದ್ದಲ್ಲಿ ಬಹಳ ಕಡಿಮೆಯದಾಗಿದ್ದು, ಪಾಲಿಕೆಯ ನಿರ್ಮಾಣಕ್ಕಾಗಿ ಮಾಡಿರುವ ಹಾಗೂ ಮಾರುಕಟ್ಟೆಗಳ ನಿರ್ವಹಣೆಗೆ ಮಾಡುತ್ತಿರುವ ನಿರ್ವಹಣೆ ವೆಚ್ಚವನ್ನು ಪರಿಗಣಿಸಿದಾಗ ಪಾಲಿಕೆಯ ಮಾರುಕಟ್ಟೆ ಮಳಿಗೆಗಳಿಂದ ವಸೂಲಿ ಮಾಡುತ್ತಿರುವ ಅದಾಯವು ಬಹಳ ನಗಣ್ಯವಾಗಿದ್ದು, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಎಲ್ಲಾ ಮಳಿಗೆಗಳ ಶುಲ್ಕವನ್ನು ಗಣನೀಯವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಪಾಲಿಕೆಯ ಮಾರುಕಟ್ಟೆಗಳನ್ನು ಬಹಳ ಹಿಂದಿನ ಕಾಲದಲ್ಲಿ ನಿರ್ಮಿಸಲಾಗಿದ್ದು, ಹಂಚಿಕೆ ಸಮಯದಲ್ಲಿ ಪರವಾನಗಿ ಕರಾರು ಪತ್ರ ಜಾರಿ ಮಾಡಿದಾಗ ಪ್ರತಿ ಹನ್ನೊಂದು ತಿಂಗಳ ಅವಧಿಗೆ ಕರಾರು ಪತ್ರವನ್ನು **ನವೀಕರಿಸಿ** ಪರವಾನಗಿ ಶುಲ್ಕವನ್ನು ಹೆಚ್ಚುವರಿ ಮಾಡಬೇಕೆಂಬ ಕರಾರನ್ನು ವಿಧಿಸಿದ್ದರೂ ಬಹಳಷ್ಟು ಮಳಿಗೆಗಳ ಕರಾರು ಪತ್ರಗಳನ್ನು ನವೀಕರಣ ಮಾಡದೇ ಮರುಹಂಚಿಕೆ ಮಾಡುವ ಸಮಯದಲ್ಲಿ ನಿಗಧಿಸಿದ ಪರವಾನಗಿ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತದೆ. ಉದಾ: ರಸೆಲ್ ಮಾರುಕಟ್ಟೆ ಪಕ್ಕದಲ್ಲಿರುವ ರಿಚರ್ಡ್ ಸ್ಕ್ವೆಯರ್ ಮೀಟರ್ ಸುಮಾರು 30,000 ಚ.ಅಡಿ ವಿಸ್ತೀರ್ಣವಾಗಿದ್ದು, ಕೇವಲ 60 ಅಂಗಡಿಗಳನ್ನು ದಶಕಗಳ ಹಿಂದೆ ನಿರ್ಮಾಣ ಮಾಡಿದ್ದು, ಇವುಗಳಿಂದ ಮಾಸಿಕ ಕೇವಲ ರೂ.18500/-ಆದಾಯ ಉಂಟಾಗುತ್ತಿದೆ. ಇದೇ ಪರಿಸ್ಥಿತಿ ಪಾಲಿಕೆಯ ಹಲವಾರು ಮಾರುಕಟ್ಟೆಗಳಲ್ಲಿ ಅಸ್ತಿತ್ವದಲ್ಲಿದೆ.

ಕರ್ನಾಟಕ ಸರ್ಕಾರವು ದಿನಾಂಕ:26-11-2009ರ ಸುತ್ತೋಲೆಯ ಸಂಖ್ಯೆ:ಯುಡಿಡಿ 21 ಜಿಎಲ್ 2099 ಪಾಲಿಕೆಯು ನಿರ್ಮಿಸಿರುವ ಮಳಿಗೆಗಳ ಬಾಡಿಗೆ/ಪರವಾನಗಿ ಶುಲ್ಕ/ಗುತ್ತಿಗೆ ಮೊತ್ತ ನಿಗಧಿಪಡಿಸಲು ಒಂದು ವೈಜ್ಞಾನಿಕ ಸೂತ್ರವನ್ನು ರೂಪಿಸಿದ್ದು, ಈ ಸೂತ್ರದ 3 ಕಲಂನಲ್ಲಿ ಅಸ್ತಿತ್ವದಲ್ಲಿರುವ ಪಾಲಿಕೆಯ ಮಾರುಕಟ್ಟೆಗಳಲ್ಲಿ ಈಗಾಗಲೇ ಹಂಚಿಕೆ ಮಾಡಿ ಪರವಾನಗಿ ಮುಕ್ತಾಯಗೊಂಡು ನವೀಕರಣ ಆಗದೇ ಇರುವ ಬಾಡಿಗೆ/ಗುತ್ತಿಗೆ ಕರಾರು ಪತ್ರಗಳಿಗೆ ಅರ್ಜಿ ಸಲ್ಲಿಸಿರುವ ಮಳಿಗೆಗಳ ನವೀಕರಣ ಶುಲ್ಕ ಹೆಚ್ಚಿಸುವ ಅವಕಾಶ ಕಲ್ಪಿಸಲಾಗಿದೆ. ಮುಂದುವರೆದಂತೆ, 1954ರಲ್ಲಿ ನೋಟಿಫಿಕೇಷನ್ ನಂ.ಎ(52)/52-53, ದಿನಾಂಕ: 20-2-1994ರಂದು ರಚಿಸಿರುವ ಮಾರುಕಟ್ಟೆಗಳ ಬೈಲಾದಲ್ಲಿ ಅಂಗಡಿ ಮಳಿಗೆಗಳಿಂದ ವಸೂಲಾದ ಶುಲ್ಕವನ್ನು ಬಾಡಿಗೆ ಅಥವಾ ಗುತ್ತಿಗೆ ಮೊತ್ತ ಎಂದು ನಾಮಕರಣ ಮಾಡಲಾಗಿದೆಯೇ ಹೊರತು ಪರವಾನಗಿ ಶುಲ್ಕ ಎಂದು ನಮೂದಿಸದೇ ಇರುವ ಹಿನ್ನೆಲೆಯಲ್ಲಿ ಪರವಾನಗಿ ಶುಲ್ಕ ಎಂಬುದರ ಬದಲಾಗಿ ಮಾಸಿಕ ಬಾಡಿಗೆ ಎಂದು ನಾಮಕರಣ ಮಾಡಿದಲ್ಲಿ ಉಲ್ಲೇಖಿತ ಸರ್ಕಾರದ ಸುತ್ತೋಲೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. 1954ರಲ್ಲಿ ರಚಿಸಿರುವ ಮಾರುಕಟ್ಟೆ ಬೈಲಾ ನಂತರ ಪಾಲಿಕೆ ಮಾರುಕಟ್ಟೆ ಸಂಬಂಧಿಸಿದ ಯಾವುದೇ ಬೈಲಾ ರಚಿಸಲಾಗದೆ ಇರುವುದು.

ಅಸ್ತಿತ್ವದಲ್ಲಿ ಪಾಲಿಕೆ ಮಾರುಕಟ್ಟೆ ಮಳಿಗೆಗಳಿಗೆ ಬಾಡಿಗೆ ನಿಗಧಿಪಡಿಸಲು ಈ ಕೆಳಕಂಡಂತೆ ನವೀಕರಣವನ್ನು ನಿಗಧಿಪಡಿಸಲಾಗಿದೆ.

X = ಮಾಸಿಕ ಬಾಡಿಗೆ

G = ನೆಲ ಬಾಡಿಗೆ/ಪಾಲಿಕೆ ನಿರ್ಧರಿಸಬೇಕಾಗಿದ್ದು

Interest free Deposit = ಕಟ್ಟಡದ ನಿರ್ಮಾಣ ವೆಚ್ಚ/ಮಳಿಗೆ ಜಾಗದ ಅಳತೆ

Refundable Deposit PWD rate ಅನ್ನು ಅಧಾರವಾಗಿಟ್ಟುಕೊಳ್ಳಬಹುದಾಗಿದೆ

Pr = Present Value of the calculated expense of construction
Pr.wq Maximum rent R = X+G
R = X + G
X = (1.96x13,50,000)-(0.96x3,37,500) = 26
110.26
= 21.060
G = 2% of guidance value (sq.ft x total area of the complex)
12 x refundable area of the complex (sq.ft)
= 108 x 10,000
12 x 300
= 10,80,000
3600
= 300
R = X + G
= 21060 + 300
= 21,360

ಹಾಲಿ ಮಳಿಗೆದಾರರು ಸುಮಾರು ರೂ.115/– ಗಳ ಮಾಸಿಕ ಬಾಡಿಗೆ ಪಾವತಿಸುತ್ತಿದ್ದು, ಮೇಲ್ಕಂಡ ಸೂತ್ರದ ಮೇರೆಗೆ ಮಾಸಿಕ ಬಾಡಿಗೆಯನ್ನು ಏಕಾಏಕಿ ರೂ.21,360/–ಗಳನ್ನು ನಿಗಧಿಪಡಿಸಿದ್ದಲ್ಲಿ ವ್ಯಾಪಾರಸ್ಥರು ತೀರ್ಮಾನದ ವಿರುದ್ಧ ಹೋರಾಟ ನಡೆಸಬಹುದಾಗಿದ್ದು ಕಾನೂನು ತೊಡಕುಗಳು ಉಂಟಾಗುವ ಸಂಭವವಿದ್ದು ಜಂಟಿ ಸಮಿತಿಯು ತಮಗಿರುವ ವಿವೇಚನ ಅಧಿಕಾರವನ್ನು ಚಲಾಯಿಸಿ ಮಾಸಿಕ ಬಾಡಿಗೆಯನ್ನು ಲೆಕ್ಕಾಚಾರದ ಶೇಕಡ 25% ರಷ್ಟು ಅಂದರೆ ರೂ.5,340/–ಕ್ಕೆ ನಿಗಧಿಪಡಿಸಿದ್ದಲ್ಲಿ ಪಾಲಿಕೆಯ ಬೊಕ್ಕಸಕ್ಕೆ ಆದಾಯು ಉಂಟಾಗುವುದಲ್ಲದೇ ಅನವಶ್ಯಕ ಕಾನೂನು ತೊಡಕನ್ನು ತಡೆಗಟ್ಟಬಹುದಾಗಿದೆ.

ಮುಂದುವರೆದಂತೆ ಮಾರುಕಟ್ಟೆ ಮಳಿಗೆಗಳ ಪರವಾನಗಿ ಶುಲ್ಕ ಪರಿಷ್ಕರಣೆಯ ಎರಡನೇಯ ಪ್ರಸ್ತಾವನೆಯನ್ನು ಕೆಳಕಂಡಂತೆ ಮಂಡಿಸಿದೆ.

ದಿನಾಂಕ:03–03–2012ರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 29(326)11–12ರ ತೀರ್ಮಾನದ ಹಿನ್ನೆಲೆಯಲ್ಲಿ ಈಗಾಗಲೇ ಪವತಿ ಹೊಂದಿರುವ/ಪರಭಾರೆ ಮಾಡಿರುವ ಮಳಿಗೆದಾರರ ಪರವಾನಗಿಯನ್ನು ರದ್ದುಪಡಿಸಿ, ಕೆ.ಎಂ.ಸಿ.ಕಾಯ್ದೆ 1976 ಕಲಂ 176ರ ಅಡಿಯಲ್ಲಿ ಪಾಲಿಕೆ ಸಭೆಗೆ ಪ್ರತ್ಯಾಯೋಜನೆ ಮಾಡಲಾಗಿರುವ ಅಧಿಕಾರವನ್ನು ಚಲಾಯಿಸಿ, ಗುತ್ತಿಗೆ ಅಧಾರದ ಮೇಲೆ ಹಂಚಿಕೆ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿದ್ದು, ಪ್ರಸ್ತುತ ಮಳಿಗೆಗಳನ್ನು ಪವತಿ ಹೊಂದಿರುವ ಪರವಾನಗಿದಾರರ ವಾರಸುದಾರರಿಗೆ ಹಾಗೂ ಪರಭಾರೆ ಹೊಂದಿ ಹಾಲಿ ವ್ಯಾಪಾರ ನಡೆಸುತ್ತಿರುವವರಿಗೆ ಹನ್ನೊಂದು ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಬಹುದಾಗಿರುತ್ತದೆ.

ಈ ರೀತಿ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಸಮಯದಲ್ಲಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಬಹುದಾಗಿದೆ.

1. ಹಿಂದೆ ಪಾವತಿಸಲಾದ ಪರವಾನಗಿ ಶುಲ್ಕವನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಸಮಯದಲ್ಲಿ ಪರವಾನಗಿ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಬಹುದಾಗಿದೆ.

ಅ) ರೂ.1000/– ವರೆಗಿನ ಮಾಸಿಕ ಪರವಾನಗಿ ಶುಲ್ಕವನ್ನು ಮಾರುಕಟ್ಟೆ ಇರುವ ಪ್ರದೇಶದ ಆಧಾರದ ಮೇಲೆ ಕನಿಷ್ಠ 100% ಹೆಚ್ಚಿಸಿ ಮಾಸಿಕ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಬಹುದಾಗಿದೆ.
ಆ) ರೂ.1001/– ರಿಂದ ರೂ.5000/–ರವರೆಗಿನ ಮಾಸಿಕ ಪರವಾನಗಿ ಶುಲ್ಕವನ್ನು ಮಾರುಕಟ್ಟೆ ಇರುವ ಪ್ರದೇಶದ ಆಧಾರದ ಮೇಲೆ ಕನಿಷ್ಠ 75% ಹೆಚ್ಚಿಸಿ ಮಾಸಿಕ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಬಹುದಾಗಿದೆ.
ಇ) ರೂ.5000/–ಕ್ಕೂ ಅಧಿಕ ಇರುವ ಮಾಸಿಕ ಪರವಾನಗಿ ಶುಲ್ಕವನ್ನು ಮಾರುಕಟ್ಟೆ ಇರುವ ಪ್ರದೇಶದ ಆಧಾರದ ಮೇಲೆ ಕನಿಷ್ಠ 50% ಹೆಚ್ಚಿಸಿ ಮಾಸಿಕ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಬಹುದಾಗಿದೆ.
ಈ) ಗುತ್ತಿಗೆಯನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ನವೀಕರಿಸಿ, ಗುತ್ತಿಗೆ ಮೊತ್ತವನ್ನು ವಾರ್ಷಿಕ 10% ಹೆಚ್ಚಿಸಿ. ಪರಿಷ್ಕರಿಸಿ ನಿಗಧಿಪಡಿಸಬಹುದಾಗಿದೆ.
ಉ) ಹಂಚಿಕೆ ಪಡೆದ ವ್ಯಕ್ತಿಗಳು 12 ತಿಂಗಳ ಭದ್ರತಾ ಠೇವಣಿಯನ್ನು ಹಾಗೂ 6 ತಿಂಗಳ ಮುಂಗಡ ಗುತ್ತಿಗೆ ಮೊತ್ತವನ್ನು ಪಾವತಿಸತಕ್ಕದ್ದು.

ಆದುದರಿಂದ ಪರವಾನಗಿ ಅವಧಿ ಮುಗಿದಿರುವ ಹಾಗೂ ಕರಾರುಗಳು ಊರ್ಜಿತಾವಸ್ಥೆಯಲ್ಲಿ ಇರುವುದಿಲ್ಲ ಎಂಬುದರ ಬಗ್ಗೆ ಪ್ರತಿ ಹಂಚಿಕೆದಾರರಿಗೂ ಪ್ರತ್ಯೇಕವಾಗಿ ತಿಳಿಯಪಡಿಸುವುದು ಹಾಗೂ ಪ್ರತಿ ಹಂಚಿಕೆದಾರರು ತಾವು ತಮಗೆ ಹಂಚಿಕೆಯಾದ ಮಳಿಗೆಯಲ್ಲಿ ಬಾಡಿಗೆದಾರರಾಗಿ ಮುಂದುವರೆಯಲು ಇಚ್ಛಿಸುವುದಾದರೆ ಬೃಹತ್ ಮಹಾನಗರ ಪಾಲಿಕೆಯು

. . .3

ನಿಗಧಿಪಡಿಸಿರುವ ಅರ್ಜಿ ನಮೂನೆಯಲ್ಲಿ ನಿಗದಿತ ಅರ್ಜಿ ದರವನ್ನು ಪಾವತಿಸಿ ಅರ್ಜಿ ಪಡೆದು, ತಮ್ಮ ಭಾವ ಚಿತ್ರವನ್ನು ಲಗತ್ತಿಸಿ, ಕೋರಿಕೆ ಸಲ್ಲಿಸಲು ಸೂಚಿಸಬಹುದು. ಅರ್ಜಿ ಸಲ್ಲಿಸುವುದರ ಜೊತೆಗೆ ಒಪ್ಪಿಕೊಂಡಿರುವ ದರದಲ್ಲಿ ತಹಲ್‌ವರೆವಿಗೂ ಬಾಕಿ ಇರುವ ಮೊತ್ತವನ್ನು ಪಾವತಿ ಮಾಡಿ ರಸೀದಿಯ ನಕಲನ್ನು ಲಗತ್ತಿಸಬೇಕಾಗುತ್ತದೆ. ಹಾಗೂ ಮುಂದಿನ ಅವಧಿಗೆ ತಾವು ಪಾವತಿ ಮಾಡಲು ಇಚ್ಚಿಸಬಹುದಾದ ಮೊತ್ತವನ್ನು ನಮೂದಿಸಬೇಕಾಗುತ್ತದೆ. ಈ ಷರತ್ತುಗಳೊಂದಿಗೆ ಪ್ರತಿಯೊಂದು ಮಳಿಗೆಯ ಬಾಡಿಗೆದಾರರಿಂದಲೂ ಪ್ರತ್ಯೇಕವಾಗಿ ಅರ್ಜಿ ಪಡೆದು ನಗರಪಾಲಿಕೆ ದಾಖಲಾತಿಗಳಲ್ಲಿ ನೊಂದಾವಣೆ ಮಾಡಿಕೊಳ್ಳಬೇಕಾಗುತ್ತದೆ. ಸ್ವಇಚ್ಛೆಯಿಂದ ನಿಗಧಿತ ಅವಧಿಯಲ್ಲಿ ಅರ್ಜಿ ಸಲ್ಲಿಸದಿದ್ದ ಬಾಡಿಗೆದಾರರು ನಗರಪಾಲಿಕೆಯ ಮಳಿಗೆಯಲ್ಲಿ ತಾವು ಮುಂದುವರೆಯಲು ಇಚ್ಚಿಸಿರುವುದಿಲ್ಲ ಎಂಬುದಾಗಿ ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಜರುಗಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪಾಲಿಕೆಯ ಆರ್ಥಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಪವತಿ ಹೊಂದಿರುವ ಹಿಂದಿನ ಪರವಾನಗಿದಾರರ ವಾರಸುದಾರರಿಗೆ ಹಾಗೂ ಪಾಲುದಾರಿಕೆ ಆಧಾರದ ಮೇಲೆ ಹಾಲಿ ವ್ಯಾಪಾರ ನಡೆಸುತ್ತಿರುವವರಿಗೆ ಸೂಕ್ತ ದಾಖಲಾತಿಗಳ ಆಧಾರದ ಮೇಲೆ ಬಾಕಿ ಇರುವ ಪರವಾನಗಿ ಶುಲ್ಕವನ್ನು ದಂಡ ಸಹಿತ ಪಾವತಿಸುವ ಹಾಗೂ ಪರವಾನಗಿ ಶುಲ್ಕವನ್ನು ಹೆಚ್ಚಿಸಿ, ನಿಗಧಿಪಡಿಸಿ ಪ್ರತಿ ವರ್ಷ ನವೀಕರಿಸುವ ಸಂದರ್ಭದಲ್ಲಿ ಪರವಾನಗಿ ಶುಲ್ಕವನ್ನು ಶೇಕಡ 10% ರಷ್ಟು ಪರಿಷ್ಕರಿಸುವ ಷರತ್ತಿನೊಂದಿಗೆ ಹಿಂದಿನ ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ವಾರಸುದಾರರಿಗೆ/ಪರಭಾರೆ ಹೊಂದಿ ವ್ಯಾಪಾರ ನಡೆಸುತ್ತಿರುವವರಿಗೆ ಕೆ.ಎಂ.ಸಿ.ಕಾಯ್ದೆ 1976ರ ಕಲಂ 176ರ ಅಡಿಯಲ್ಲಿ ಹನ್ನೊಂದು ತಿಂಗಳ ಅವಧಿಗೆ ಗುತ್ತಿಗೆ ಮಾಡುವ ಅಧಿಕಾರವನ್ನು ಒಂದು ತಿಂಗಳ ಕಾಲಾವಕಾಶ ನೀಡಿ, ಉಪ ಆಯುಕ್ತರು (ಮಾರುಕಟ್ಟೆ) ರವರ ಹಂತದಲ್ಲಿಯೇ ತೀರ್ಮಾನಿಸುವಂತೆ, ಪಾಲಿಕೆಯ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ದಿನಾಂಕ: 9–1–2014ರ ಆಯುಕ್ತರ ಟಿಪ್ಪಣಿ.

**ನಿರ್ಣಯ : 16–1–2014 : ಮುಂದೂಡಲಾಗಿದೆ**

| | |
|---|---|
| **ಸಹಿ/–** | **ಸಹಿ/–** |
| (ವೈ.ಆರ್.ಗೌರಮ್ಮ) | ( ಡಾ. ಎ.ಎಸ್. ಶಿವಪ್ರಸಾದ್) |
| ಅಧ್ಯಕ್ಷರು | ಅಧ್ಯಕ್ಷರು |
| ಮಾರುಕಟ್ಟೆ ಸ್ಥಾಯಿ ಸಮಿತಿ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ |

**ನಿರ್ಣಯ : ದಿನಾಂಕ : 4–2–2014 :**

ಆಯುಕ್ತರ ದಿನಾಂಕ: 9–1–2014ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಹಾಲಿ ಮಾರುಕಟ್ಟೆಗಳಲ್ಲಿ ಮಳಿಗೆದಾರರಿಗೆ ಬಹಳ ಹಿಂದಿನ ಕಾಲದಲ್ಲಿ ನಿಗಧಿಪಡಿಸಲಾಗಿದ್ದ ಪರವಾನಗಿ ಶುಲ್ಕವನ್ನೇ, ಪರಿಷ್ಕರಣೆ ಮಾಡದೆ ಮುಂದುವರೆಸಿಕೊಂಡು ಬಂದಿದ್ದು, ಈಗಿನ ಸೂಚ್ಯಾಂಕ (Cost of living) ಕ್ಕೆ ಹೋಲಿಸಿದಲ್ಲಿ ಹಾಲಿ ಪಾವತಿಸುತ್ತಿರುವ ಪರವಾನಗಿ ಶುಲ್ಕವು ಅಪ್ರಸ್ತುತವಾಗಿದ್ದು, ಇದರಿಂದ ಪಾಲಿಕೆಗೆ ನಿಯಮಿತವಾಗಿ ಬರಬೇಕಾದ ಆದಾಯದಲ್ಲಿ ಅಪಾರ ಸೋರಿಕೆ ಉಂಟಾಗುತ್ತಿರುವುದು ಹಾಗೂ ಮಾರುಕಟ್ಟೆಗಳಿಂದ ಬರುತ್ತಿರುವ ಆದಾಯಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಮಾರುಕಟ್ಟೆಗಳ ನಿರ್ವಹಣೆಗೆ ವೆಚ್ಚ ಮಾಡಲಾಗುತ್ತಿದ್ದು, ಪಾಲಿಕೆಯ ಬೊಕ್ಕಸಕ್ಕೆ ಅಪಾರ ನಷ್ಟ ಉಂಟಾಗುತ್ತಿರುವುದನ್ನು ಜಂಟಿ–ಸಮಿತಿ ಸಭೆಯು ಅತೀ ಗಂಭೀರವಾಗಿ ಪರಿಗಣಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

ದಿನಾಂಕ: 26.10.2009ರ ಘನ ಸರ್ಕಾರದ ಸುತ್ತೋಲೆ ಸಂಖ್ಯೆ: ಯುಡಿಡಿ 221 ಜಿಇಎಲ್ 2009ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಂಡು ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಪರವಾನಗಿ ಶುಲ್ಕವನ್ನು **"ಗುತ್ತಿಗೆ ಮೊತ್ತ"** ಎಂದು ಪುನರ್ ನಾಮಕರಣ ಮಾಡಿ, **'ಪ್ರಸಂಗ 1'**ರಲ್ಲಿ ಸೂಚಿಸಿರುವ ಸಮೀಕರಣದ ಮೇರೆಗೆ ಪ್ರಸ್ತುತ ಗುತ್ತಿಗೆ ಮೊತ್ತವನ್ನು **1)** ಹಳೆಯ ಮಾರುಕಟ್ಟೆಗಳಿಗೆ **'ಪ್ರಸಂಗ 3'**ರ ಮೇರೆಗೆ ಹಾಗೂ **2)** ನೂತನವಾಗಿ ಹಂಚಿಕೆ ಮಾಡಲಾಗುವ ಮಳಿಗೆಗಳಿಗೆ **'ಪ್ರಸಂಗ 2'**ರಂತೆಯೂ ಪಾಲಿಕೆ ಸಭೆಯ ನಿರ್ಣಯ ದಿನಾಂಕದಿಂದ ಅನ್ವಯವಾಗುವಂತೆ ನಿಗಧಿಪಡಿಸುವುದು.

ಮುಂದುವರೆದಂತೆ, ಸರ್ಕಾರಿ ಸುತ್ತೋಲೆ ಸಂಖ್ಯೆ : ಯುಡಿಡಿ 221 ಜಿಇಎಲ್ 2009 ದಿನಾಂಕ: 26–10–2009ನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪರವಾನಗಿ ಶುಲ್ಕವನ್ನು **"ಗುತ್ತಿಗೆ ಮೊತ್ತ"** ಎಂದು ಪುನರ್ ನಾಮಕರಣ ಮಾಡಿ, ಮೂಲ ಹಂಚಿಕೆದಾರರಿಗೆ ನೂತನವಾಗಿ ಗುತ್ತಿಗೆ ಕರಾರು ಪತ್ರವನ್ನು ನೊಂದಾಯಿಸಿ, ಸರ್ಕಾರಿ ಸುತ್ತೋಲೆ ಮೇರೆಗೆ, ಎಸ್.ಆರ್ ಮತ್ತು ಗೈಡೆನ್ಸ್ ವ್ಯಾಲ್ಯೂ ಆಧಾರದ ಮೇಲೆ ನಿಗಧಿಪಡಿಸಬೇಕಾದ ಗುತ್ತಿಗೆ ಮೊತ್ತವನ್ನು ಜಯನಗರ ವಾಣಿಜ್ಯ ಸಂಕೀರ್ಣ ಮತ್ತು ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡದ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ 2006–2007ರಲ್ಲಿ ಈಗಾಗಲೇ ಪರಿಷ್ಕೃತ ದರದಲ್ಲಿ ಬಾಡಿಗೆಯನ್ನು ನಿಗದಿಪಡಿಸಿರುವುದನ್ನು ಪರಿಗಣನೆಗೆ ತೆಗೆದುಕೊಂಡು ಈ ಎರಡು ಸಂಕೀರ್ಣದ ಮಳಿಗೆಗಳಿಗೆ ಮಾತ್ರ ಮುಂದುವರೆಸಿ, ಬಹಳ ಹಿಂದಿನಿಂದಲೂ ವಾರ್ಷಿಕವಾಗಿ ಹೆಚ್ಚಿಸಬೇಕಾದ ಗುತ್ತಿಗೆ ಮೊತ್ತವನ್ನು ಹೆಚ್ಚಿಸದೇ ಸರ್ಕಾರದ ಸುತ್ತೋಲೆ

...4

ಮೇರೆಗೆ ಪುನರ್ ನಿಗಧಿಪಡಿಸಿದಲ್ಲಿ ಮಳಿಗೆದಾರರಿಗೆ ಏಕಾಏಕಿ ಅತೀ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದನ್ನು ಗಣನೆಗೆ ತೆಗೆದುಕೊಂಡು, ಸಮೀಕರಣದ ಲೆಕ್ಕಾಚಾರದಂತೆ **Guidance Value & SR rate** ಆಧಾರದ ಮೇಲೆ ಗುತ್ತಿಗೆ ಮೊತ್ತದ **ಕನಿಷ್ಠ 25%** ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಮಳಿಗೆಗಳನ್ನು ಗುತ್ತಿಗೆಗೆ ನೀಡಿ, ನಿಯಮಾವಳಿಗಳ ಮೇರೆಗೆ ಪ್ರತೀ ವರ್ಷ ಗುತ್ತಿಗೆ ಕರಾರು ಪತ್ರವನ್ನು ನವೀಕರಿಸಿ, ನವೀಕರಣ ಸಂದರ್ಭದಲ್ಲಿ ನಿಗಧಿಪಡಿಸಲಾದ ಗುತ್ತಿಗೆ ಮೊತ್ತವನ್ನು **ಶೇ5%** ರಷ್ಟು ಹೆಚ್ಚಿಸುವುದೆಂದು ಜಂಟಿ ಸಮಿತಿಯ ಸಭೆಯು ನಿರ್ಣಯಿಸಿತು. ಸದರಿ ನಿರ್ಣಯವನ್ನು ಪಾಲಿಕೆಯ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲು ತೀರ್ಮಾನಿಸಲಾಯಿತು.

ಸಹಿ/–
(ವೈ.ಆರ್.ಗೌರಮ್ಮ)
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ

ಸಹಿ/–
( ಡಾ. ಎ.ಎಸ್. ಶಿವಪ್ರಸಾದ್)
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ

ಪ್ರತಿಯನ್ನು :

1) ಪೂಜ್ಯ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ಕಳುಹಿಸಿದೆ.
4) ಮಾನ್ಯ ಆಡಳಿತ ಪಕ್ಷದ ನಾಯಕರು/ವಿರೋಧ ಪಕ್ಷದ ನಾಯಕರು,ರವರಿಗೆ ಕಳುಹಿಸಿದೆ.
5) ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಕಳುಹಿಸಲು ಕೋರಿದೆ.
6) ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸದಸ್ಯರುಗಳಿಗೆ ಕಳುಹಿಸಿದೆ.
7) ಅಪರ ಆಯುಕ್ತರು(ಹಣಕಾಸು–ಮಾರುಕಟ್ಟೆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಅಪರ ಆಯುಕ್ತರು(ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಕಾನೂನು ಕೋಶದ ಮುಖ್ಯಸ್ಥರು, ರವರಿಗೆ ಕಳುಹಿಸಿದೆ.
10) ಮುಖ್ಯ ಅಭಿಯಂತರರು(ಮಾರುಕಟ್ಟೆ) ರವರಿಗೆ ಕಳುಹಿಸಿದೆ.
11) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13) ಸಹ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
14) ಮಾಹಿತಿ ತಂತ್ರಜ್ಞಾನ ಸಲಹೆಗಾರರು. ರವರಿಗೆ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕಳುಹಿಸಿದೆ.

## ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಜಂಟಿ ಸಮಿತಿಯಲ್ಲಿ
### ದಿನಾಂಕ: 16-1-2014 ಮತ್ತು ದಿನಾಂಕ: 4-2-2014ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ : | | | | ಹಾಜರಿದ್ದ ಅಧಿಕಾರಿಗಳು : |
|---|---|---|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು | ಡಾ: ಎ.ಎಸ್. ಶಿವಪ್ರಸಾದ್ | ಅಧ್ಯಕ್ಷರು | ವಿಶೇಷ ಆಯುಕ್ತರು (ಯೋಜನೆ) |
| ಬಿ.ಆರ್. ನಂಜುಂಡಪ್ಪ | ಸದಸ್ಯರು | ಎಂ.ಇ.ಪಿಳ್ಳಪ್ಪ | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಸಿದ್ದಲಿಂಗಯ್ಯ (ಸಿದ್ದು) | ಸದಸ್ಯರು | ವೀಣಾ ನಾಗರಾಜು | ಸದಸ್ಯರು | ಉಪ ಆಯುಕ್ತರು(ಮಾರುಕಟ್ಟೆ) |
| ವಿಜಯ.ಎ | ಸದಸ್ಯರು | ಗಂಗಾಧರ.ಹೆಚ್.ಎನ್ | ಸದಸ್ಯರು | ಕಾನೂನು ಕೋಶದ ಮುಖ್ಯಸ್ಥರು |
| ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | ಬಿ.ಎಸ್. ಆನಂದ್ | ಸದಸ್ಯರು | ಕಂದಾಯ ಅಧಿಕಾರಿ |
| ಎಲ್. ಶ್ರೀನಿವಾಸ್ | ಸದಸ್ಯರು | ಕೃಷ್ಣ. ವಿ | ಸದಸ್ಯರು | ಸಹಾಯಕ ನಿಯಂತ್ರಕರು (ಹಣಕಾಸು) |
| ಲತಾ.ಕೆ | ಸದಸ್ಯರು | ಸಂಪತ್‌ರಾಜ್. ಆರ್ | ಸದಸ್ಯರು | ಸ.ಕಾ.ಅಭಿಯಂತರರು(ಯೋಜನೆ-ದಕ್ಷಿಣ) |
| ಎಸ್. ಕ್ರಿಯಾಶೈಲಜ | ಸದಸ್ಯರು | ಗೋವಿಂದರಾಜು.ಎನ್ | ಸದಸ್ಯರು | ಸಹ ಕಂದಾಯ ಅಧಿಕಾರಿ (ಪೂರ್ವ-ಮಾರುಕಟ್ಟೆ) |
| ಎನ್. ಪಿಳ್ಳಪ್ಪ | ಸದಸ್ಯರು | ಉದಯಕುಮಾರ್.ಆರ್ | ಸದಸ್ಯರು | ಸಹ ಕಂದಾಯ ಅಧಿಕಾರಿ(ಪಶ್ಚಿಮ-ಮಾರುಕಟ್ಟೆ) |
| ಮುನಿಸಂಜೀವಯ್ಯ | ಸದಸ್ಯರು | ಸರಳ | ಸದಸ್ಯರು | |
| ಕ್ವೀನ್ ಎಲಿಜಬೆತ್ | ಸದಸ್ಯರು | ಸಿ.ಎಸ್. ರಾಧಾಕೃಷ್ಣ | ಸದಸ್ಯರು | |

( ಹಿಂದಿನ ಸಭೆಯ ನಡವಳಿಯನ್ನು ಓದಿ ದಾಖಲಿಸಿಕೊಳ್ಳಲಾಯಿತು)

**ವಿಷಯದ ಸಂಖ್ಯೆ: ಮಾ.ಸ್ಥಾ.ಸ/ 6 /2013-14**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಣ್ಣ ಮತ್ತು ದೊಡ್ಡ ಮಾರುಕಟ್ಟೆ ಅಂಗಡಿಗಳನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲಾಗಿದ್ದು, ಈ ಹಿಂದೆ ಮಳಿಗೆ ಹಂಚಿಕೆಯು 11 ತಿಂಗಳ ಅವಧಿಗೆ ಎಂದು ಕರಾರು ಪತ್ರ ಪಡೆಯಲಾಗಿರುತ್ತದೆ. ಆದರೆ, ಇದುವರೆಗೆ ಈ ಅವಧಿ ಮುಕ್ತಾಯವಾದ ತರುವಾಯ ಯಾವುದೇ ಮಳಿಗೆಯನ್ನು ನಗರಪಾಲಿಕೆ ವಶಕ್ಕೆ ಪಡೆದು ಹೊಸದಾಗಿ ಟೆಂಡರ್ ಕರೆದು ಹಂಚಿಕೆ ಮಾಡಿರುವುದಿಲ್ಲ ಹಾಗೂ ಹಿಂದಿನ ಹಂಚಿಕೆದಾರರೇ ಮುಂದುವರೆದಿದ್ದು, ಹಳೆಯ ಪರವಾನಗಿ ಶುಲ್ಕವನ್ನು ಪಾವತಿಸುತ್ತಿರುವುದರಿಂದ ನಗರಪಾಲಿಕೆಗೆ ಇದರಿಂದ ಆದಾಯ ಹೆಚ್ಚಾಗಿರುವುದಿಲ್ಲ.

ಕೆಲವೊಂದು ಮಳಿಗೆಗಳ ಪರವಾನಗಿದಾರರು ಬೇರೆಯವರೊಂದಿಗೆ ಪಾಲುದಾರಿಕೆ ಮಾಡಿಕೊಂಡಿದ್ದು, ಈ ಆಧಾರದ ಮೇಲೆ ಮಳಿಗೆಗಳಲ್ಲಿ ವ್ಯಾಪಾರ ಮಾಡುತ್ತಿದ್ದು, ಮೂಲ ಹಂಚಿಕೆದಾರರು ಪಾಲುದಾರಿಕೆಯಿಂದ ಹೊರಬಂದು ಇನ್ನೊಬ್ಬ ಪಾಲುದಾರರ ಹೆಸರಿಗೆ ವರ್ಗಾವಣೆ ಮಾಡಲು ಕೋರಿರುವ ಮೇರೆಗೆ ವರ್ಗಾವಣೆ ಮಾಡಿರುವ ಪ್ರಕರಣಗಳಲ್ಲಿ ಪರವಾನಗಿಯನ್ನು ಶೇಕಡ 25 ರಷ್ಟು ಹೆಚ್ಚಿಸಿ, ವರ್ಗಾವಣೆ ಮಾಡಿರುವುದರಿಂದ ನಗರಪಾಲಿಕೆಗೆ ಆದಾಯವು ಸಹ ಹೆಚ್ಚಾಗುತ್ತದೆ.

ಈ ಹಿಂದೆ ದಿನಾಂಕ: 24-08-1987ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ನಡೆದ ಜಂಟಿ ಸಮಿತಿಯ ನಡವಳಿಯ ವಿಷಯದ ಸಂಖ್ಯೆ:14(73)ರಲ್ಲಿ ನಿರ್ಣಯಿಸಿರುವಂತೆ ವರ್ಗಾವಣೆ ಸಮಯದಲ್ಲಿ ಇರುವ ಪರವಾನಗಿ ದರಕ್ಕೆ ಶೇಕಡ 25 ರಷ್ಟನ್ನು ಹೆಚ್ಚಿಸಿ, 12 ತಿಂಗಳ ಭದ್ರತಾ ಠೇವಣಿ ಒಂದು ತಿಂಗಳ ಮುಂಗಡ ಮತ್ತು 6 ತಿಂಗಳ ದಂಡವನ್ನು ವಿಧಿಸಿ ವರ್ಗಾವಣೆ ಮಾಡಲು ತೀರ್ಮಾನಿಸಿರುವ ಅಂಶಗಳ ಆಧಾರದ ಮೇಲೆ ವರ್ಗಾವಣೆಯನ್ನು ಸಹ ಮಾಡಲಾಗಿರುತ್ತದೆ

ಈ ರೀತಿಯ ವರ್ಗಾವಣೆಯನ್ನು ಮಾಡಿದ್ದಲ್ಲಿ ಪಾಲಿಕೆಗೆ ಮಾಸಿಕ ಬಾಡಿಗೆ 19 ತಿಂಗಳ ಬಾಡಿಗೆ ಮೊತ್ತವು ಬರುವುದಲ್ಲದೆ ಮಳಿಗೆಯ ಬಾಕಿ ಪರವಾನಗಿ ಶುಲ್ಕವೇನಾದರೂ ಇದ್ದಲ್ಲಿ ಅದನ್ನು ಸಹ ಪಾವತಿ ಮಾಡಿಕೊಳ್ಳಲಾಗುತ್ತದೆ. ಜೊತೆಗೆ ಹಿಂದಿನ ಪರವಾನಗಿದಾರರು ಪಾವತಿಸಿದ್ದ 12 ತಿಂಗಳ ಭದ್ರತಾ ಠೇವಣಿ, ಆರು ತಿಂಗಳ ದಂಡ ಮತ್ತು ಒಂದು ತಿಂಗಳ ಮುಂಗಡವು ಸಹ ಪಾಲಿಕೆಗೆ ಉಳಿಯಲಿದೆ ಇದನ್ನು ಗಮನಿಸಿದರೆ ಪಾಲಿಕೆಗೆ ಸಾಕಷ್ಟು ಆದಾಯವು ಸಹ ಬರುವುದರ ಜೊತೆಗೆ ಅನಧಿಕೃತ ಪರವಾನಗಿಯನ್ನು ತಡೆಗಟ್ಟಿದಂತಾಗುತ್ತದೆ. ಆಯುಕ್ತರವರ ಕಛೇರಿ ಆದೇಶದ ಸಂಖ್ಯೆ:ಬಿ12(6)ಪಿಆರ್/23/10-11, ದಿ:21-04-2010 ರಲ್ಲಿ ಮಳಿಗೆ ಪರವಾನಗಿದಾರರ ಅವಧಿಯು ಮುಕ್ತಾಯಗೊಂಡ ಪ್ರಕರಣಗಳಲ್ಲಿ ನವೀಕರಣ ಇತ್ಯಾದಿ ಕಾರ್ಯಗಳನ್ನು ಉಪ ಆಯುಕ್ತರು (ಮಾರುಕಟ್ಟೆ) ರವರು ಕ್ರಮ ಕೈಗೊಳ್ಳಲು ಆದೇಶಿಸಲಾಗಿದ್ದು, ಇದುವರೆಗೆ ಅವಧಿ ಮುಕ್ತಾಯಗೊಂಡ ಯಾವುದೇ ಮಳಿಗೆಗಳಿಗೆ ನವೀಕರಣ ಮಾಡಿರುವುದಿಲ್ಲ ಮತ್ತು ಹಿಂದಿನ ಪರವಾನಗಿ ಶುಲ್ಕವನ್ನು ಇಂದಿನವರೆಗೆ ಪಾವತಿಸಿರುತ್ತಾರೆ. ಹಾಗೂ ಹಲವು ಹಂಚಿಕೆದಾರರು ಪರವಾನಗಿ ಶುಲ್ಕ ಬಾಕಿ ಉಳಿಸಿಕೊಂಡಿರುತ್ತಾರೆ. ಆದುದರಿಂದ, ಹಾಲಿ ವ್ಯಾಪಾರ ಮಾಡುತ್ತಿರುವವರನ್ನು ಗುರುತಿಸಿ ಪ್ರತಿ ಹಂಚಿಕೆದಾರರಿಗೆ ಒಂದು ಮಳಿಗೆಗೆ ಸೀಮಿತಗೊಳಿಸಿ, ಮಳಿಗೆ ಪರವಾನಗಿ ಶುಲ್ಕವನ್ನು ಶೇ.100 ರಷ್ಟು ಹೆಚ್ಚಿಸಿ, 3 ವರ್ಷಗಳ ಅವಧಿಗೆ ಮೀರದಂತೆ ಪ್ರತಿ ವರ್ಷ ನವೀಕರಿಸುವ ಬಗ್ಗೆ

. . .2

ಮತ್ತು ಮರಣ ಪತ್ರದ ಆಧಾರದ ಅಥವಾ ಪಾಲುದಾರರ ಅಡಿಯಲ್ಲಿ ವರ್ಗಾವಣೆಯನ್ನು ಉಪ ಆಯುಕ್ತರು (ಮಾರುಕಟ್ಟೆ) ರವರು ಅಧೀನದಲ್ಲಿಯೇ ನಿರ್ವಹಿಸುವ ಬಗ್ಗೆ ಮಾರುಕಟ್ಟೆ ಸ್ಥಾಯಿ ಸಮಿತಿಯ ಅಧ್ಯಕ್ಷರು ದಿ: 19-07-2011ರಂದು ಆಯುಕ್ತರವರಿಗೆ ಬರೆದಿರುವ ಪತ್ರದಲ್ಲಿ ಕೋರಿರುವ ಮೇರೆಗೆ, ಸದರಿ ಪ್ರಸ್ತಾವನೆ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾರುಕಟ್ಟೆ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಆಯುಕ್ತರವರ ದಿ: 08-12-2011ರ ಟಿಪ್ಪಣಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾರುಕಟ್ಟೆ ಇಲಾಖೆಯಲ್ಲಿ ಬರುವ ಮಳಿಗೆಗಳ ಪರವಾನಗಿಯನ್ನು ನವೀಕರಿಸುವ ಕುರಿತು ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ಮಳಿಗೆಗಳಲ್ಲಿ ಹಾಲಿ ಪರವಾನಗಿದಾರರಲ್ಲದೆ ಬೇರೆಯವರು ಅನಧಿಕೃತವಾಗಿ ವ್ಯಾಪಾರ ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಆದರೂ ಕೂಡ ಎಲ್ಲಾ ಮಾರುಕಟ್ಟೆಗಳಿಂದ ಪೂರ್ಣ ಮಾಹಿತಿಗಳನ್ನು ಪಡೆದು ಮುಂದಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲು ತೀರ್ಮಾನಿಸಲಾಗಿತ್ತು. ಆದರೆ ಒಬ್ಬರ ಪರವಾನಗಿಯನ್ನು ಮತ್ತೊಬ್ಬರ ಹೆಸರಿಗೆ ವರ್ಗಾವಣೆ ಮಾಡಲು ಕೆ.ಎಂ.ಸಿ. ಕಾಯ್ದೆ 1976ರ ಅಡಿಯಲ್ಲಿ ಅವಕಾಶವಿಲ್ಲ. ಈ ಮೇಲೆ ತಿಳಿಸಿರುವಂತೆ ಪರವಾನಗಿದಾರರು ಬೇರೊಬ್ಬರನ್ನು ಪಾಲುದಾರರನ್ನಾಗಿ ಮಾಡಿಕೊಂಡು ತಾವು ಪಾಲುದಾರಿಕೆಯಿಂದ ಹೊರ ಹೋದ ಮೇಲೆ ಇವರು ಅಂಗಡಿಯ ಮಾಲೀಕರಾಗುತ್ತಾರೆ. ಆದರೆ ನಗರಪಾಲಿಕೆ ಲೆಕ್ಕದಲ್ಲಿ ಇವರು ಅನಧಿಕೃತ ವ್ಯಾಪಾರಸ್ಥರಾಗುತ್ತಾರೆ. ಇಂತಹ ಅನಧಿಕೃತ ವ್ಯಾಪಾರಸ್ಥರು ನಗರಪಾಲಿಕೆ ಮಾರುಕಟ್ಟೆಗಳಲ್ಲಿ ಸರ್ವೇಸಾಮಾನ್ಯವಾಗಿದೆ.

ಏಕೆಂದರೆ ಇವರನ್ನು ತೆರವುಗೊಳಿಸಲು ನಗರಪಾಲಿಕೆ ನೋಟೀಸು ಜಾರಿ ಮಾಡಿದರೆ ಇದರ ಆಧಾರ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದು ಸದರಿ ಅನಧಿಕೃತ ವ್ಯಾಪಾರಸ್ಥರು ಮುಂದುವರಿಯುತ್ತಾರೆ. ಇಷ್ಟಲ್ಲದೆ ಕಾನೂನು ತೊಡಕು, ರಾಜಕೀಯ ಒತ್ತಡ ಇವೆಲ್ಲವುಗಳ ತೊಡಕಾಟದಲ್ಲಿ ಈ ಅನಧಿಕೃತ ಮಳಿಗೆದಾರರು ಹಳೆ ಪರವಾನಗಿ ಶುಲ್ಕವನ್ನು ಪಾವತಿಸಿಕೊಂಡು ಈವರೆಗೆ ಮುಂದುವರೆದಿರುವುದು ಕಂಡು ಬಂದಿದೆ. ಇಂತಹ ಅನಧಿಕೃತ ವ್ಯಾಪಾರಸ್ಥರನ್ನು ತೆರವುಗೊಳಿಸಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ, ಈ ಎಲ್ಲಾ ತೊಡಕುಗಳಿಂದ ಮಹಾನಗರ ಪಾಲಿಕೆಯು ನಷ್ಟವನ್ನು ಅನುಭವಿಸುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಇಂತಹ ಮಳಿಗೆದಾರರಿಗೆ ಶೇಕಡ 100% ರಷ್ಟು ಹೆಚ್ಚಿಸಿ, 19 ತಿಂಗಳ ಪರವಾನಗಿ ಮೊತ್ತ ನಗರ ಪಾಲಿಕೆಗೆ ಒಂದೇ ಸಾರಿ ಬರುವುದರಿಂದ, ನಗರಪಾಲಿಕೆ ಆದಾಯ ಹೆಚ್ಚಾಗುವುದು.

ಈ ಹಿಂದೆ ದಿ: 24-08-1987ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ನಡೆದ ಜಂಟಿ ಸಭೆಯ ನಡವಳಿಯ ವಿಷಯದ ಸಂಖ್ಯೆ: 14(73) ರಲ್ಲಿ ನಿರ್ಣಯಿಸಿರುವಂತೆ ಈವರೆಗೆ ಕ್ರಮ ಕೈಗೊಂಡು, ಈಗ್ಗೆ ಕೆಲವು ವರ್ಷಗಳಿಂದ ಇದನ್ನು ತಡೆಹಿಡಿಯಲಾಗಿದೆ. ಆದ್ದರಿಂದ ಈ ಬಗ್ಗೆ ಹಾಲಿ ಮಳಿಗೆಯಲ್ಲಿ ವ್ಯಾಪಾರ ಮಾಡುತ್ತಿರುವ ಅನಧಿಕೃತ ವ್ಯಾಪಾರಸ್ಥರನ್ನು ಕ್ರಮಬದ್ಧಗೊಳಿಸುವ ಬಗ್ಗೆ ಸ್ಪಷ್ಟ ನಿಲುವನ್ನು ಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ಮಾರುಕಟ್ಟೆ ಸ್ಥಾಯಿ ಸಮಿತಿಯ ದಿ: 15-02-2012ರ ನಿರ್ಣಯ :

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮಾರುಕಟ್ಟೆ ಸ್ಥಾಯಿ ಸಮಿತಿಯ ದಿ: 15-02-2012ರ ನಿರ್ಣಯವನ್ನು ಪರಿಶೀಲಿಸುತ್ತಾ, ಈಗಾಗಲೇ ಮಳಿಗೆಗಳ ಹಂಚಿಕೆ ಅವಧಿಯು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ಮಳಿಗೆಗಳನ್ನು ಪಾಲಿಕೆಯ ವಶಕ್ಕೆ ಪಡೆದು, ಟೆಂಡರ್ ಕರೆದು ನಿಯಮಾನುಸಾರ ಹಂಚಿಕೆ ಮಾಡುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪರವರು ಮಂಡಿಸಿದ ನಿರ್ಣಯ ವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ: 15-02-2012ರ ನಿರ್ಣಯವನ್ನು ಪರಿಶೀಲಿಸುತ್ತಾ, ಈಗಾಗಲೇ ಮಳಿಗೆಗಳ ಹಂಚಿಕೆ ಅವಧಿಯು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ಮಳಿಗೆಗಳನ್ನು ಪಾಲಿಕೆಯ ವಶಕ್ಕೆ ಪಡೆದು, ಟೆಂಡರ್ ಕರೆದು ನಿಯಮಾನುಸಾರ ಹಂಚಿಕೆ ಮಾಡುವುದೆಂದು ತೀರ್ಮಾನಿಸಲಾಯಿತು".

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೂರ್ವ, ಪಶ್ಚಿಮ, ಮತ್ತು ದಕ್ಷಿಣ ವಲಯಗಳಲ್ಲಿ ಒಟ್ಟು 121 ಮಾರುಕಟ್ಟೆಗಳಿದ್ದು ಇವುಗಳಲ್ಲಿ ಕೆಲವು ಮಾರುಕಟ್ಟೆಗಳ ಮಳಿಗೆಗಳನ್ನು ಬಹಳ ಹಿಂದೆ ಹಂಚಿಕೆ ಮಾಡಲಾಗಿದ್ದು, ನಿಯಾಮವಳಿಗಳ ಮೇರೆಗೆ ಪ್ರತಿ ಮಳಿಗೆ ಹಂಚಿಕೆದಾರರು 11 ತಿಂಗಳಿಗೊಮ್ಮೆ ಪರವಾನಗಿ ಕರಾರು ಪತ್ರವನ್ನು ನವೀಕರಿಸಿಕೊಳ್ಳ ಬೇಕಾಗಿದ್ದು ಬಹಳಷ್ಟು ಮಳಿಗೆಗಳ ಕರಾರು ಪತ್ರ ನವೀಕರಣವಾಗಿರುವುದಿಲ್ಲ. ಇದರಿಂದ ಪ್ರತಿ ನವೀಕರಣ ಸಮಯದಲ್ಲಿ ಪರವಾನಗಿ ಶುಲ್ಕವನ್ನು ಹೆಚ್ಚಿಸಲು ಸಾಧ್ಯವಾಗದೆ ಹಳೆ ಪರವಾನಗಿ ಶುಲ್ಕವನ್ನೇ ಪಾವತಿಸಿಕೊಳ್ಳುತ್ತಿರುವುದರಿಂದ ಪಾಲಿಕೆ ಬೊಕ್ಕಸಕ್ಕೆ ಅಪಾರ ಆರ್ಥಿಕ ನಷ್ಟ ಉಂಟಾಗುತ್ತಿದೆ.

. . .3

ಮುಂದುವರೆದಂತೆ ಕರಾರುಪತ್ರ ನವೀಕರಣ ಮಾಡಿದ್ದಲ್ಲಿ ಮಳಿಗೆಗಳಲ್ಲಿ ಮೂಲ ಹಂಚಿಕೆದಾರರೇ ವ್ಯಾಪಾರ ನಡೆಸುತ್ತಿರುವರೇ ಅಥವಾ ಪರಭಾರೆ ಆಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಬಹುದಾಗಿದ್ದು, ಇದರಿಂದ ಅನಧಿಕೃತ ವ್ಯಾಪಾಸ್ಥರನ್ನು ತಡೆಗಟ್ಟಬಹುದಾಗಿದೆ.

ಮೇಲ್ಕಂಡ ವರದಿಯನ್ನು ಅವಗಾಹನೆಗೆ ಇರಿಸಿ ಸರ್ಕಾರಿ ಆದೇಸದ ಸಂಖ್ಯೆ : ಯು.ಡಿ.ಡಿ. 221ಜಿಇಎಲ್.2009, ದಿನಾಂಕ: 26-10-2009ರ ಅನ್ವಯ ಪರಿಷ್ಕರಣೆ ಮಾಡಿ, ಕರಾರು ಪತ್ರ ನವೀಕರಣ ಸಮಯದಲ್ಲಿ ಪರಿಷ್ಕರಿಸಿದ ದರದ ಮೇಲೆ ಕನಿಷ್ಟ 10% ಪರವಾನಗಿ ಶುಲ್ಕವನ್ನು ಹೆಚ್ಚಿಸಬಹುದಾಗಿದೆ. ಅಲ್ಲದೇ ನವೀಕರಣ ಸಮಯದಲ್ಲಿ ಬಾಕಿ ಇರುವ ಪರವಾನಗಿ ಶುಲ್ಕ ಪಾವತಿಯನ್ನು ಕಡ್ಡಾಯಗೊಳಿಸಿದ್ದಲ್ಲಿ ಪಾಲಿಕೆ ಬಾಕಿ ಇರುವ ಕೋಟ್ಯಾಂತರ ರೂಪಾಯಿಗಳ ಆದಾಯ ಉಂಟಾಗುತ್ತದೆ.

ಇನ್ನುಳಿದಂತೆ ಹಲವಾರು ಮಳಿಗೆಗಳಲ್ಲಿ ಮೂಲ ಹಂಚಿಕೆದಾರರ ಬದಲಿಗೆ ಅವರ ವಾರಸುದಾರರು ಅಥವಾ ಪಾಲುದಾರಿಕೆ ಕರಾರು ಪತ್ರದ ಆಧಾರದ ಮೇಲೆ ಮೂಲ ಹಂಚಿಕೆದಾರರ ಬದಲಿಗೆ ಪಾಲುದಾರರು ವ್ಯಾಪಾರ ನಡೆಸುತ್ತಿದ್ದು, ಇವರಿಗೆ ಪರವಾನಗಿ ನವೀಕರಣ ಮಾಡಲು ನಿಯಮಾವಳಿಗಳಲ್ಲಿ ಅವಕಾಶ ಇರುವುದಿಲ್ಲ. ಹಾಗೂ ಬಾಕಿ ವಸೂಲಾತಿಗೆ ಕೆ.ಎಂ.ಸಿ ಕಾಯ್ದೆ 1976ರ ಕಲಂ 470 ಮತ್ತು 370ರ ಮೇರೆಗೆ ಮೂಲ ಹಂಚಿಕೆದಾರರಿಗೆ ನೋಟಿಸ್‌ಗಳನ್ನು ಜಾರಿ ಮಾಡಿ ವಸೂಲಾತಿಗಾಗಿ ಕ್ರಮ ಜರುಗಿಸಬೇಕಾಗಿದ್ದು, ವಾರಸುದಾರರಿಗೆ ಅಥವಾ ಪಾಲುದಾರರಿಗೆ ನೋಟೀಸ್ ನೀಡಲು ಅವಕಾಶ ಇರುವುದಿಲ್ಲ ಹಾಗೂ ಇದರಿಂದ ಪಾಲಿಕೆ ಅನವಶ್ಯಕ ಕಾನೂನು ತೊಡಕುಗಳನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಗುವ ಸಾಧ್ಯತೆಗಳಿರುತ್ತದೆ. ಈ ಸಮಸ್ಯೆಗಳನ್ನು ನಿವಾರಿಸಬೇಕಾದ್ದಲ್ಲಿ ವಾರಸುದಾರರು ಅಥವಾ ಪಾಲುದಾರರನ್ನು ಮೂಲ ಹಂಚಿಕೆದಾರರನ್ನಾಗಿ ಕ್ರಮಬದ್ಧಗೊಳಿಸಬೇಕಾಗುತ್ತದೆ. ಈ ಹಿಂದೆ 2013ರಲ್ಲಿ ಮಲ್ಲೇಶ್ವರಂ ಮಾರುಕಟ್ಟೆ ಪುನರ್ ನಿರ್ಮಾಣ ಸಮಯದಲ್ಲಿ 48 ಜನ ವಾರಸುದಾರರಿಗೆ/ಪಾಲುದಾರರಿಗೆ ಮೂಲ ಹಂಚಿಕೆದಾರರಿಗೆ ಸರಿಸಮವಾಗಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿಕೊಡುವಂತೆ ಮಾನ್ಯ ಉಚ್ಚ ನ್ಯಾಯಾಲಯವು ಡಬ್ಲ್ಯೂ.ಪಿ ಸಂಖ್ಯೆ:13410-13450 ಡಬ್ಲ್ಯೂ.ಪಿ ಸಂಖ್ಯೆ: 13191-13194 ಡಬ್ಲ್ಯೂ.ಪಿ ಸಂಖ್ಯೆ: 13410-13415/2013. ದಿ: 28-6-2013ರಲ್ಲಿ ಆದೇಶ ಜಾರಿ ಮಾಡಿರುತ್ತದೆ. ಹಾಗೂ ಜಾಹಿರಾತು ಬೈಲಾ -06ರ ಕರಡು ತಿದ್ದುಪಡಿಯಲ್ಲಿ ಒಬ್ಬ ಅಧಿಕೃತ ಜಾಹಿರಾತುದಾರರ ಫಲಕದ ಪರವಾನಗಿಯನ್ನು ರೂ.50000/- ವರ್ಗಾವಣೆ ಶುಲ್ಕ ಪಾವತಿಸಿಕೊಂಡು ಬೇರೆ ಜಾಹಿರಾತುದಾರರಿಗೆ ಪರವಾನಗಿ ವರ್ಗಾವಣೆ ಪ್ರಸ್ತಾವನೆಗೆ ಘನ ಸರ್ಕಾರವು ದಿ: 9-7-2013 ರ ಆದೇಶದ ಸಂಖ್ಯೆ: ನಇ362 ಎಂಎನ್‌ಯು 2010ರಲ್ಲಿ ಅನುಮೋದನೆ ನೀಡಿರುತ್ತದೆ. ಈ ಆದೇಶಗಳ ಹಿನ್ನೆಲೆಯಲ್ಲಿ ಮಳಿಗೆಗೆ ಬಾಕಿ ಪರವಾನಗಿ ಶುಲ್ಕ ಪಾವತಿ ಹಾಗೂ ವರ್ಗಾವಣೆ ಶುಲ್ಕ ರೂ.50,000/-ದ ಸಹಿತ ಅರ್ಜಿ ಸಲ್ಲಿಸಿಕೊಂಡು ನೂತನವಾಗಿ ಹಂಚಿಕೆ ಮಾಡಿ 12 ತಿಂಗಳ ಮುಂಗಡ ಹಾಗೂ 6 ತಿಂಗಳ ಭದ್ರತಾ ಶುಲ್ಕ ಪಾವತಿಸಿಕೊಳ್ಳಬಹುದಾಗಿದೆ. ಇದರಿಂದ ಪಾಲಿಕೆಗೆ ಉಂಟಾಗುಬಹುದಾದ ಅನವಶ್ಯಕ ಕಾನೂನು ತೊಡಕುಗಳನ್ನು ನಿವಾರಿಸಬಹುದು. ಪಾಲಿಕೆ ಬೊಕ್ಕಸಕ್ಕೆ ಒಂದೇ ಬಾರಿಗೆ ಅಪಾರ ಆದಾಯ ಉಂಟಾಗುವುದಲ್ಲದೇ ಮಾರುಕಟ್ಟೆ ಕಛೇರಿಗಳ ದಾಖಲಾತಿಗಳನ್ನು ಕ್ರಮಬದ್ಧಗೊಳಿಸಲು ಅನುವು ಮಾಡಿಕೊಟ್ಟಂತಾಗುತ್ತದೆ.

ಆದುದರಿಂದ, 1) ಬಾಕಿ ಇರುವ ಪೂರ್ಣ ಮೊತ್ತವನ್ನು ವರ್ಗಾವಣೆ ಅರ್ಜಿಯ ಜೊತೆಯಲ್ಲಿ ಮುಂಗಡವಾಗಿ ಒಂದೇ ಕಂತಿನಲ್ಲಿ ಡಿ.ಡಿ.ಮೂಖಾಂತರ ಪಾವತಿಸುವ ಹಾಗೂ ಸರ್ಕಾರಿ ಆದೇಶದ ಸಂಖ್ಯೆ: ಯುಡಿಡಿ 221 ಜಿಇಎಲ್ 2009 ದಿನಾಂಕ:26-10-2009ರ ಅನ್ವಯ ಪರಿಷ್ಕರಿಸಿದ ದರದ ಪರವಾನಗಿ ಶುಲ್ಕವನ್ನು 10% ಹೆಚ್ಚಿಸುವ ಷರತ್ತಿಗೊಳಪಡಿಸಿ ಮೂಲ ಹಂಚಿಕೆದಾರರ ಪರವಾನಗಿಯನ್ನು 11(ಹನ್ನೊಂದು)ತಿಂಗಳ ಅವಧಿಗೆ ನವೀಕರಿಸಲು ಹಾಗೂ 2) ಬಾಕಿ ಇರುವ ಪೂರ್ಣ ಮೊತ್ತವನ್ನು ವರ್ಗಾವಣೆ ಅರ್ಜಿಯ ಜೊತೆಯಲ್ಲಿ ಮುಂಗಡವಾಗಿ ಒಂದೇ ಕಂತಿನಲ್ಲಿ ಡಿ.ಡಿ ಮುಖಾಂತರ ಪಾವತಿಸುವ ಹಾಗೂ ಸರ್ಕಾರಿ ಆದೇಶದ ಸಂಖ್ಯೆ: ಯುಡಿಡಿ 221 ಜಿಇಎಲ್ 2009, ದಿನಾಂಕ:26-10-2009ರ ಅನ್ವಯ ಪರಿಷ್ಕರಿಸಿದ ದರದ ಪರವಾನಗಿ ಶುಲ್ಕವನ್ನು 10% ಹೆಚ್ಚಿಸುವ, ಮಳಿಗೆ ಪರವಾನಗಿ ವರ್ಗಾವಣೆ ಕೋರುವ ಅರ್ಜಿಯ ಜೊತೆ ರೂ.5000/-ವರ್ಗಾವಣೆ ಶುಲ್ಕ ಮತ್ತು 12 ತಿಂಗಳ ಮುಂಗಡ ಹಣ ಹಾಗೂ 6 ತಿಂಗಳ ಭದ್ರತಾ ಠೇವಣಿ ಮೊತ್ತ ಪಾವತಿಸುವ ಷರತ್ತಿನ ಮೇಲೆ ವಾರಸುದಾರರ/ಪಾಲುದಾರರ ಹೆಸರಿಗೆ ನೂತನವಾಗಿ ಸದರಿ ಮಳಿಗೆಯನ್ನು 11 (ಹನ್ನೊಂದು) ತಿಂಗಳ ಅವಧಿಗೆ ಹಂಚಿಕೆ ಮಾಡಿ ಸಕ್ರಮಗೊಳಿಸುವ ಪ್ರಸ್ತಾವನೆಯನ್ನು ಪಾಲಿಕೆಯ ಆರ್ಥಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಜಂಟಿ ಸಭೆಯ ಮುಂದೆ ಹಾಗೂ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಿರುವ ದಿನಾಂಕ:10-1-2014ರ ಆಯುಕ್ತರ ಟಿಪ್ಪಣಿ.

. . . 4

**<u>ನಿರ್ಣಯ : 16-1-2014</u> : ಮುಂದೂಡಲಾಗಿದೆ**

| | |
|---|---|
| **ಸಹಿ/-** | **ಸಹಿ/-** |
| (ವೈ.ಆರ್.ಗೌರಮ್ಮ) | ( ಡಾ. ಎ.ಎಸ್. ಶಿವಪ್ರಸಾದ್) |
| ಅಧ್ಯಕ್ಷರು | ಅಧ್ಯಕ್ಷರು |
| ಮಾರುಕಟ್ಟೆ ಸ್ಥಾಯಿ ಸಮಿತಿ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ |

**<u>ನಿರ್ಣಯ : ದಿನಾಂಕ : 4-2-2014</u>** :

ಆಯುಕ್ತರ ದಿನಾಂಕ: 10-1-2014ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಸರ್ಕಾರಿ ಸುತ್ತೋಲೆ ಸಂಖ್ಯೆ: ಯುಡಿಡಿ. 221 ಜಿಇಎಲ್ 2009 ದಿನಾಂಕ: 26-10-2009ನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪರವಾನಗಿ ಶುಲ್ಕವನ್ನು **"ಗುತ್ತಿಗೆ ಮೊತ್ತ"** ಎಂದು ಪುನರ್ ನಾಮಕರಣ ಮಾಡಿ ಮೂಲ ಹಂಚಿಕೆದಾರರಿಗೆ ನೂತನವಾಗಿ ಗುತ್ತಿಗೆ ಕರಾರು ಪತ್ರವನ್ನು ನೊಂದಾಯಿಸಿ, ಸರ್ಕಾರಿ ಆದೇಶದ ಮೇರೆಗೆ, **ಎಸ್.ಆರ್**. ಮತ್ತು **ಗೈಡೆನ್ಸ್ ವ್ಯಾಲ್ಯೂ** ಆಧಾರದ ಮೇಲೆ ನಿಗಧಿಪಡಿಸಬೇಕಾದ ಗುತ್ತಿಗೆ ಮೊತ್ತವನ್ನು ಜಯನಗರ ವಾಣಿಜ್ಯ ಸಂಕೀರ್ಣ ಮತ್ತು ನೇತಾಜಿ ಸುಭಾಷ್ ಚಂದ್ರಬೋಸ್ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ 2006-07ರಲ್ಲಿ ಈಗಾಗಲೇ ಪರಿಷ್ಕೃತ ದರದಲ್ಲಿ ಪರವಾನಗಿ ಶುಲ್ಕ ನಿಗಧಿಪಡಿಸಿರುವುದನ್ನು ಪರಿಗಣನೆಗೆ ತೆಗೆದುಕೊಂಡು ಈ ಎರಡು ಸಂಕೀರ್ಣದ ಮಳಿಗಳಿಗೆ ಮಾತ್ರ ಮುಂದುವರೆಸಿ, ಇನ್ನುಳಿದ ಮಾರುಕಟ್ಟೆಗಳ ಮಳಿಗೆಗಳಿಗೆ ಬಹಳ ಹಿಂದಿನಿಂದಲೂ ದರ ಪರಿಷ್ಕರಣೆ ಆಗಿಲ್ಲದೆ, **ಎಸ್.ಆರ್** ಮತ್ತು **ಗೈಡೆನ್ಸ್ ವ್ಯಾಲ್ಯೂ** ದರದಲ್ಲಿ ನಿಗಧಿಪಡಿಸಿದ್ದಲ್ಲಿ ಮಳಿಗೆದಾರರಿಗೆ ಏಕಾಏಕಿ ಆರ್ಥಿಕ ಹೊರೆ ಉಂಟಾಗುವುದನ್ನು ಪರಿಗಣನೆಗೆ ತೆಗೆದುಕೊಂಡು ಪರಿಷ್ಕೃತ ದರದ **ಶೇಕಡ**. **25%** ರಷ್ಟು ಗುತ್ತಿಗೆಯ ಮೊತ್ತವನ್ನು ನಿಗಧಿಪಡಿಸುವುದು. ಹಾಗೂ **ವಾರಸುದಾರರ/ಪಾಲುದಾರರ** ಹೆಸರಿನಲ್ಲಿ ವರ್ಗಾವಣೆ ಮಾಡುವ ಸಂದರ್ಭಗಳಲ್ಲಿ ಹಿಂದಿನ ಹಂಚಿಕೆದಾರರ ಬಾಕಿ ಮೊತ್ತವನ್ನು ಮುಂಗಡವಾಗಿ ಒಂದೇ ಕಂತಿನಲ್ಲಿ ಪಾವತಿಸಿಕೊಂಡು ಪರಿಷ್ಕೃತ ದರದಲ್ಲಿ **12 ತಿಂಗಳ** ಹಿಂದಿರುಗಿಸುವ **"ಭದ್ರತಾ ಠೇವಣಿ"** ಮತ್ತು ಹಿಂದಿರುಗಿಸದ **6 ತಿಂಗಳ ವರ್ಗಾವಣೆ ಶುಲ್ಕ** ಮತ್ತು **ಒಂದು ತಿಂಗಳ ಮುಂಗಡ ಮೊತ್ತವನ್ನು** ಪಾವತಿಸಿಕೊಳ್ಳುವುದು ಹಾಗೂ ಎಲ್ಲಾ ವರ್ಗಾವಣೆಗಳ ಪ್ರಸ್ತಾವನೆಗೆ ಮಾರುಕಟ್ಟೆ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಕ್ರಮವಹಿಸತಕ್ಕದ್ದು.

ಮೇಲ್ಕಂಡ ರೀತಿಯಲ್ಲಿ ನೊಂದಾಯಿಸಲಾದ ಎಲ್ಲಾ ಮಳಿಗೆಗಳ ಗುತ್ತಿಗೆ ಕರಾರು ಪತ್ರವನ್ನು ಪ್ರತಿ 11 ತಿಂಗಳಿಗೆ ನವೀಕರಿಸಿ, ನಿಗಧಿತ ಪರಿಷ್ಕೃತ ಶುಲ್ಕದ **ಶೇಕಡ 5ರಷ್ಟನ್ನು** ಹೆಚ್ಚಿಸುವುದು ಎಂದು ಜಂಟಿ ಸಮಿತಿಯ ಸಭೆಯು ನಿರ್ಣಯಿಸಿ, ಸದರಿ ವಿಷಯದ ಬಗ್ಗೆ ನಿರ್ಣಯವನ್ನು ಅನುಮೋದನೆಗಾಗಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.

| | |
|---|---|
| ಸಹಿ/- | ಸಹಿ/- |
| (ವೈ.ಆರ್.ಗೌರಮ್ಮ) | ( ಡಾ. ಎ.ಎಸ್. ಶಿವಪ್ರಸಾದ್) |
| ಅಧ್ಯಕ್ಷರು | ಅಧ್ಯಕ್ಷರು |
| ಮಾರುಕಟ್ಟೆ ಸ್ಥಾಯಿ ಸಮಿತಿ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ |

ಪ್ರತಿಯನ್ನು :

1) ಪೂಜ್ಯ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ಕಳುಹಿಸಿದೆ.
4) ಮಾನ್ಯ ಆಡಳಿತ ಪಕ್ಷದ ನಾಯಕರು/ವಿರೋಧ ಪಕ್ಷದ ನಾಯಕರು,ರವರಿಗೆ ಕಳುಹಿಸಿದೆ.
5) ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಕಳುಹಿಸಲು ಕೋರಿದೆ.
6) ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸದಸ್ಯರುಗಳಿಗೆ ಕಳುಹಿಸಿದೆ.
7) ಅಪರ ಆಯುಕ್ತರು(ಹಣಕಾಸು-ಮಾರುಕಟ್ಟೆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಅಪರ ಆಯುಕ್ತರು(ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಕಾನೂನು ಕೋಶದ ಮುಖ್ಯಸ್ಥರು, ರವರಿಗೆ ಕಳುಹಿಸಿದೆ.
10) ಮುಖ್ಯ ಅಭಿಯಂತರರು(ಮಾರುಕಟ್ಟೆ) ರವರಿಗೆ ಕಳುಹಿಸಿದೆ.
11) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13) ಸಹ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
14) ಮಾಹಿತಿ ತಂತ್ರಜ್ಞಾನ ಸಲಹೆಗಾರರು. ರವರಿಗೆ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕಳುಹಿಸಿದೆ.